ಹೇಳಿದ್ದೇವೆ.ನೀರು ಬಿಡುವುದರಿಂದ ನಮ್ಮ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಆ ಭಾಗದ ರೈತರು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಪರಿಹಾರ ಕೊಡುವಂತಹ ಪರಿಸ್ಥಿತಿ ಈಗಾಗಲೇ ನಿರ್ಮಾಣವಾಗಿದೆ. ಒಂದು ಎಕರೆಗೆ ಸುಮಾರು ೨೫ ಸಾವಿರ ರೂಪಾಯಿ ಕೊಡಬೇಕಾದಂತಹ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಸರ್ಕಾರದ ನಿಲುವು ಏನು ಎನ್ನುವುದನ್ನು ಈಗ ಸ್ಪಷ್ಟಪಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು):-ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರಾದ ಬಾಲಕೃಷ್ಣರವರು, ಬಂಡೆಪ್ಪ ಖಾಶೆಂಪೂರ್‌ರವರು, ಕಾವೇರಿ ನದಿ ವಿಚಾರವಾಗಿ ಕೋರ್ಟ್‌ನಲ್ಲಿ ನಡೆದಂತಹ ವಿಚಾರದ ಬಗ್ಗೆ ಇವತ್ತು ಬೆಳಗ್ಗೆ ಏನು ವಿಷಯ ಪ್ರಸ್ತಾಪ ಮಾಡಿದರು, ನಾನು ಅವರಲ್ಲಿ ಒಂದು ಮನವಿ ಮಾಡುವುದೇನೆಂದರೆ, ಇದರ ಬಗ್ಗೆ ಏನೇನು ನಡೆದಿದೆ, ಸರ್ಕಾರದ ನಿಲುವು ಏನು ಎನ್ನುವುದನ್ನು ಪ್ರಸ್ತಾಪ ಮಾಡುತ್ತೇನೆ. ದಯವಿಟ್ಟು ಶಾಸಕರು ತಮ್ಮ ತಮ್ಮ ಸ್ಥಳಕ್ಕೆ ಹೋಗಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:-ತಾವು statement ಕೊಡಿ.

3. ಕಾವೇರಿ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಂದ ಹೇಳಿಕೆ

ಶ್ರೀ ಜಗದೀಶ್ ಶೆಟ್ಟರ್(ಮುಖ್ಯ ಮಂತ್ರಿಯವರು):-ತಾವು ಹಾಗೆಯೇ ಇದ್ದು statement ಕೊಡಬೇಕೆಂದರೆ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ಕಳೆದ ೨-೩ ದಿವಸಗಳಲ್ಲಿ ಈ ಅಧಿವೇಶನ ಪ್ರಾರಂಭವಾದ ಮೇಲೆ, ಕಾವೇರಿ ನದಿ ನೀರನ್ನು ತಮಿಳುನಾಡಿನ ಜಲಾಶಯಗಳಿಗೆ ಬಿಡಬೇಕೆಂದು ಮಾನ್ಯ ಸುಪ್ರೀಂಕೋರ್ಟ್‌ನ ಆದೇಶವಾದ ಮೇಲೆ, ಅವತ್ತಿನ ದಿವಸವೂ ಕೂಡ ನಮ್ಮ ವಿರೋಧ ಪಕ್ಷದ ನಾಯಕರು, Floor Leadersಎಲ್ಲರನ್ನು ಕರೆದು ಅವರ ಜೊತೆ ಸಮಾಲೋಚನೆ ಮಾಡಿ, ಹಲವಾರು ವಿಚಾರಗಳನ್ನು ವಿಧಾನ ಸಬೆ ಹಾಗೂ ವಿಧಾನ ಪರಿಷತ್ತಿನಲ್ಲಿಯೂ ಸಹಿತ ಅದರ ಬಗ್ಗೆ ವಿವರಣೆ ಕೊಟ್ಟೆ ಮತ್ತು

ಸುಧೀರ್ಘವಾದಂತಹ ಒಂದು ಹೇಳಿಕೆಯನ್ನೂ ಕೊಟ್ಟೆ. ಸುಪ್ರೀಂ ಕೋರ್ಟ್‌ನ ಆದೇಶವಾದ ಮೇಲೆ ಮುಂದೆ CMC ಸಭೆ ನಡೆಯಿತು. ಅವತ್ತು ನಾವು ದೆಹಲಿಯಲ್ಲಿಯೇ ಇದ್ದೆವು.ನಮ್ಮ ಮುಖ್ಯ ಕಾರ್ಯದರ್ಶಿಯವರು ಆ CMC ಮೀಟಿಂಗ್‌ಗೆ ಹೋಗಿದ್ದರು.ಒಂದು ಕಡೆ ಸುಪ್ರೀಂಕೋರ್ಟ್‌ನ ಆದೇಶ. ಇನ್ನೊಂದು ಕಡೆ CMC. CMCಯಲ್ಲಿ ವಿಷಯಗಳು ಚರ್ಚೆಯಾಗಿ,ರಾಜ್ಯದ ಪರವಾಗಿ ಏನು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು, ಇಲ್ಲಿನ ಪರಿಸ್ಥಿತಿ ಏನಿದೆ ಅವೆಲ್ಲವನ್ನೂ ಸಹಿತ ನಮ್ಮ ಮುಖ್ಯ ಕಾರ್ಯದರ್ಶಿಯವರು ಮಂಡನೆ ಮಾಡಿದರು. ಒಂದು ಕಡೆ ಸುಪ್ರೀಂಕೋರ್ಟ್‌ನ direction, ಮತ್ತೊಂದು ಕಡೆ CMC ಯಲ್ಲಿ ೧೨ ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಇತ್ತು. ಅಲ್ಲಿ ಒಂದು ದುರ್ದೈವದ ಸಂಗತಿ ಎಂದರೆ, ಇದೇ CMC, ಸೆಪ್ಟೆಂಬರ್ ತಿಂಗಳನಲ್ಲಿ ಒಂದು ರೋಡ್ ಮ್ಯಾಪ್ ಮಾಡಿ ಕರ್ನಾಟಕ ತಮಿಳುನಾಡಿಗೆ ನವೆಂಬರ್ ತಿಂಗಳಿನಲ್ಲಿ, ಡಿಸೆಂಬರ್‌ನಲ್ಲಿ, ಜನವರಿಯಲ್ಲಿ ಎಷ್ಟೆಷ್ಟು ಟಿ.ಎಂ.ಸಿ ನೀರನ್ನು ಬಿಡಬೇಕೆಂದು ಆದೇಶ ಮಾಡಿದ್ದರು.ಅದರ ಪ್ರಕಾರ ಡಿಸೆಂಬರ್ ತಿಂಗಳಿನಲ್ಲಿ ಅವರು normal year ಇದ್ದಾಗಲೇ ೧೦.೩೭ ಟಿ.ಎಂ.ಸಿ ನೀರು ಬಿಡಬೇಕೆನ್ನುವುದನ್ನು ಆದೇಶದಲ್ಲಿ ಹೇಳಿದ್ದರು.Distressyear ಇದ್ದಾಗ ಅಂದರೆ ೧೫% is normal. ೬.೧೨ ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಸೆಪ್ಟೆಂಬರ್ ತಿಂಗಳಿನಲ್ಲಿ CMC ಯವರು ಆದೇಶ ಮಾಡಿದರು. ಆದರೆ ಮೊನ್ನೆ ನಡೆದಂತಹ CMC ಸಭೆಯಲ್ಲಿ ಕರ್ನಾಟಕ ರಾಜ್ಯದ stand ಏನಿದೆ, ನಮ್ಮ ವಾದ ಏನಿದೆ ಎನ್ನುವುದೆಲ್ಲಾ ರೆಕಾರ್ಡ್ಸ್‌ನಲ್ಲಿ ಇದೆ. ರೋಡ್ ಮ್ಯಾಪ್‌ನ ಪ್ರಕಾರ ೬.೧೨ ಟಿ.ಎಂ.ಸಿ ಬಿಡುವಂಥದ್ದು ಏನಿದೆ, ಇವತ್ತಿನ ಪರಿಸ್ಥಿತಿಯಲ್ಲಿ ಅದನ್ನೂ ಬಿಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಕುಡಿಯುವ ನೀರಿನ ಸಮಸ್ಯೆ ಇದೆ. Standing crop ಗೆ ನೀರು ಬೇಕು, ಬರಗಾಲದ ಬವಣೆ ಇವೆಲ್ಲವನ್ನು ಮಾನ್ಯ ಮುಖ್ಯ ಕಾರ್ಯದರ್ಶಿಯವರು detail ಆಗಿ ಹೇಳಿದರು.ಇದನ್ನೆಲ್ಲಾ

ಕೇಳಿಕೊಂಡು, ಕೊನೆಗೆ entire Decemberತಿಂಗಳಿಗೆ ೧೨ ಟಿ.ಎಂ.ಸಿ ನೀರನ್ನುಬಿಡಬೇಕೆಂದು ಆದೇಶವಾಯಿತು. ಯಾವ ಹಿನ್ನೆಲೆಯಲ್ಲಿ ಆಜ್ಞೆ ಮಾಡಿದರು, ಏಕೆ ಮಾಡಿದರು, ಯಾವ influence ಆಯಿತು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅದರಿಂದ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆಯಾಯಿತು. ಅದರಿಂದ ನಮ್ಮ ರಾಜ್ಯದ ರೈತರಿಗೆ ತೊಂದರೆಯಾಗುತ್ತಿದೆ, standing cropಗೆ ತೊಂದರೆಯಾಗುತ್ತಿದೆ. CMC ಯವರು ಏನು ರೋಡ್ ಮ್ಯಾಪ್ ಮಾಡಿ, ಸೆಪ್ಟೆಂಬರ್‌ತಿಂಗಳಿನಲ್ಲಿ ಆದೇಶ ಮಾಡಿದ್ದರು,ಅದಕ್ಕೆ ವ್ಯತಿರಿಕ್ತವಾಗಿ ಇವತ್ತು ೧೨ ಟಿ.ಎಂ.ಸಿ ನೀರನ್ನು ಬಿಡಬೇಕೆಂದು ಹೇಳಿದ್ದಾರಲ್ಲಾ ಅದು ನಮ್ಮ ರಾಜ್ಯದ ಹಿತಕ್ಕೆ ಮಾರಕವೆಂದು ನಾವು ಅದರ ಮೂರನೇ ದಿವಸ ಬೆಳಗ್ಗೆನೇ CRA ಗೆ petition file ಮಾಡಿ ಬಂದೆವು. ಇವತ್ತು CMC ಆದೇಶ ಈ ರೀತಿ ಇದೆ ಈ ಹಿಂದಿನದಕ್ಕಿಂತ quantity double ಆಗಿದೆ. ಇದು ತಪ್ಪು. ಇದು injustice ಆಗುತ್ತದೆ ಎಂದು ತಕ್ಷಣವೇ ಮಾನ್ಯ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿರುವ CRAಗೆ ಆವತ್ತೇ ಮನವಿ ಕೊಟ್ಟು ಬಂದಿದ್ದೇವೆ. ಆದಷ್ಟು ಬೇಗ ನೆ hearing ಮಾಡಬೇಕು. Hearing ಆಗಿ, ಇದರ ಬಗ್ಗೆ ನಿಮ್ಮ ಪುನರ್‌ವಿಮರ್ಶೆ ಮಾಡಿ ಆದೇಶ ಆಗುವವರೆಗೂ CMC ಯವರು ಏನು ಆಜ್ಞೆ ಮಾಡಿದ್ದಾರೆ ಅದನ್ನು ತಡೆ ಹಿಡಿಯಬೇಕೆಂದು ಮನವಿ ಮಾಡಿಕೊಂಡಿದ್ದೇವೆ ಹಾಗೂ ನಮ್ಮ ಹಿರಿಯ ನ್ಯಾಯವಾದಿಗಳ ಜೊತೆಗೂ ಸಮಾಲೋಚನೆ ನಡೆಸಿದ್ದೇವೆ. ಇವತ್ತು ಸುಪ್ರೀಂಕೋರ್ಟ್‌ನಲ್ಲಿ ಮಧ್ಯಾಹ್ನ ೩.೦೦ ಗಂಟೆಯ ನಂತರ ಆ ಪ್ರಕರಣದ hearing ಬರುತ್ತಿದೆ. ಅಲ್ಲಿಯೂ ಸಹಿತ CMC ಏನು injustice ಮಾಡಿದೆ ಇದರ ಬಗ್ಗೆಯೂ ಸುಪ್ರೀಂಕೋರ್ಟ್‌ನ ಗಮನಕ್ಕೆ ತರಬೇಕು, modify ಮಾಡುವ ಬಗ್ಗೆ ಮನವಿ ಮಾಡಬೇಕೆಂದು ಹಿರಿಯ ನ್ಯಾಯವಾದಿಗಳಿಗೆ ಮನವಿ ಮಾಡಿಕೊಂಡು ಬಂದಿದ್ದೇವೆ. ಇದು ವಸ್ತುಸ್ಥಿತಿ ಆಗಿದೆ. ಕಳೆದ ವಾರ ಆದಂತಹ ಸುಪ್ರೀಂ ಕೋರ್ಟ್‌ನ ನಿರ್ಣಯದ ಹಿನ್ನೆಲೆಯಲ್ಲಿ ಇವತ್ತು ನಾವು ನೀರು

ಬಿಡಬೇಕು ಎಂದು ಏನಿತ್ತು, ಆ ಸಂದರ್ಭದಲ್ಲಿ ನಿಮಗೆ ವಿಧಾನಮಂಡಲದಲ್ಲಿ ನಾವು ದೆಹಲಿಗೆ ಹೋದಾಗ ಮುಂದೆ ಯಾವುದೇ ಕಾನೂನಿನ ತೊಡಕುಗಳು ಉಂಟಾಗಬಾರದೆಂದು ಏನು ಆ ಭರವಸೆಕೊಟ್ಟಿದ್ದೆವೋ ಅದರ ಪ್ರಕಾರವೇ ನಡೆದು-ಕೊಂಡಿದ್ದೇವೆ. ಇವತ್ತು ಸೋಮವಾರ ಕೇಸ್‌ನ hearing ಬರುತ್ತದೆ. ಅಲ್ಲಿ ನಮ್ಮ ವಾದವನ್ನು ಕಾನೂನಿನ ಯಾವುದೇ ತೊಡಕು ಇಲ್ಲದೆ ಮಂಡನೆ ಮಾಡಲು ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇವೆಲ್ಲಾ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್‌ನ ಆದೇಶದ ಪ್ರಕಾರ, ಕಾವೇರಿ ನದಿ ನೀರು ಬಿಡಬೇಕೆಂದು ಹೇಳಿದ್ದರು. ಅವರ ಪ್ರಕಾರ ನಿನ್ನೆ ಸಾಯಂಕಾಲದವರೆಗೂ ನಿನ್ನೆ ಸಂಜೆಯವರೆವಿಗೆ ನೀರು ಬಿಟ್ಟಿದ್ದೇವೆ. ಸಂಜೆಯ ನಂತರ, ರಾತ್ರಿ comply ಮಾಡಿದ್ದೇವೆ. ಇವತ್ತು ಬೆಳಗ್ಗೆ ಯಾವುದೇ ನೀರು ಬಿಟ್ಟಿಲ್ಲ. ಸುಪ್ರೀಂಕೋರ್ಟ್‌ನ ಆದೇಶವನ್ನು comply ಮಾಡುವುದು ನಮ್ಮ ಜಬಾಬ್ದಾರಿಯಾಗಿತ್ತು. ಅದನ್ನು ಮಾಡಿದ್ದೇವೆಯೇ ಹೊರತು, ಅದನ್ನು ಹೊರತುಪಡಿಸಿ ಯಾವುದೇ ನೀರನ್ನು ಬಿಟ್ಟಿಲ್ಲ. ಇದು ವಸ್ತುಸ್ಥಿತಿ. ಇವತ್ತು ಮಧ್ಯಾಹ್ನದ ಮೇಲೆ ಸುಪ್ರೀಂಕೋರ್ಟ್‌ನಲ್ಲಿ hearing ಏನಿದೆ, ಅದು hearing ಆಗಿ, CMC ಯ stand ಏನಿದೆ ಅದನ್ನೂ ಕೂಡ ನಾವು CRA ಮುಂದೆ challenge ಮಾಡಿದ್ದೇವೆ. ಅದನ್ನೂ ಕೂಡ ಸುಪ್ರೀಂಕೋರ್ಟ್‌ನ ಮುಂದೆ mention ಮಾಡುತ್ತೇವೆ. ಸಾಯಂಕಾಲ ಸುಪ್ರೀಂಕೋರ್ಟ್‌ನಲ್ಲಿ ಇದರ ಬಗ್ಗೆ hearing ಆದ ಮೇಲೆ ಏನು ನಿರ್ಣಯವಾಗುತ್ತದೆ, ಅದರ ಪ್ರಕಾರ ನಾವು ನಡೆದುಕೊಳ್ಳೋಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿನ್ನೆ ಸಾಯಂಕಾಲದಿಂದ ನೀರು ಬಿಡುವುದನ್ನು ನಿಲ್ಲಿಸಿದ್ದೇವೆ. Further ನಾವು ನೀರು ಬಿಟ್ಟಿಲ್ಲ. ಇವತ್ತು ಬೆಳಗ್ಗೆ ನೀರನ್ನು ಬಿಡುವಂತಹ ಪ್ರಶ್ನೆ ಇಲ್ಲ. ಈ ರೀತಿ ನಮ್ಮ stand ಇದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರಲ್ಲಿ, ಜೆಡಿ(ಎಸ್) ಪಕ್ಷದ ನಾಯಕರಲ್ಲಿ ಹಾಗೂ ಎಲ್ಲಾ ಶಾಸಕರಲ್ಲಿ ವಿನಂತಿ ಮಾಡುವುದೇನೆಂದರೆ, ರಾಜ್ಯದ

ಹಿತಾಸಕ್ತಿ ಕಾಪಾಡುವುದರಲ್ಲಿ ನಾವೂ ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಹೀಗಾಗಿ ಕೇಂದ್ರದ ಸಚಿವರು, ಲೋಕ ಸಭಾ ಸದಸ್ಯರು ಅವರನ್ನೂ ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರನ್ನೂ ಭೇಟಿ ಮಾಡಿ, ನಮ್ಮ status ಏನಿದೆ ಎನ್ನುವುದನ್ನೂ ತಿಳಿಸಿ ಹೇಳಿದ್ದೇವೆ. ನಿಮ್ಮ ಕಡೆಯಿಂದಲೂ ಕೂಡ ಸರ್ಕಾರಕ್ಕೆ, ಜನತೆಯ ಸಹಾಯ ಬೇಕು ಎನ್ನುವುದನ್ನು ಕೇಂದ್ರಕ್ಕೂ ಮನವಿ ಮಾಡಿದ್ದೇವೆ. ಈ ಹಿನ್ನೆಲೆ ಇರುವಂತಹ ಸಂದರ್ಭದಲ್ಲಿ ಸರ್ಕಾರ ಎಲ್ಲಾ ರೀತಿಯ ಸ್ಪಂದನೆ ಮಾಡುತ್ತದೆ. ಪ್ರಾಮಾಣಿಕವಾದಂತಹ ಕಾನೂನಿನ ಹೋರಾಟ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ರೀತಿಯಲ್ಲಿ ನಮ್ಮ ರೈತರ ಹಿತಾಸಕ್ತಿಗೆ ತೊಂದರೆಯಾಗುವಂತಹ ಕೆಲಸ ಮಾಡುವುದಿಲ್ಲ. ರೈತರ ಹಿತಾಸಕ್ತಿ ರಕ್ಷಣೆ ಮಾಡುವಂತಹ ಕೆಲಸ ಮಾಡುತ್ತೇವೆ. ದಯವಿಟ್ಟು ತಾವೆಲ್ಲಾ ಸಹಕಾರ ಕೊಡಬೇಕು. ಇಂತಹ ಸಾರ್ವಜನಿಕ ವಿಷಯ ಬಂದಾಗ, ನಮ್ಮ ರಾಜ್ಯದಲ್ಲಿ ಆಡಳಿತ ಪಕ್ಷದವರು, ವಿರೋಧ ಪಕ್ಷದವರೆಲ್ಲರೂ ಒಂದಾಗಿ, ಕೆಲಸ ಮಾಡುವಂಥದ್ದನ್ನು ನೋಡಿದ್ದೇವೆ. ಒಂದಾಗಿ ಹೋರಾಟ ಮಾಡಿರುವುದನ್ನು ನೋಡಿದ್ದೇವೆ. ತಾವೂ ಕೈ ಜೋಡಿಸಿದ್ದೀರಿ. ನಿಮಗೆಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಮಧ್ಯಾಹ್ನ ಸುಪ್ರೀಂಕೋರ್ಟ್‌ನ ಆದೇಶ ಏನಾಗುತ್ತದೆ ಎನ್ನುವುದನ್ನು ನೋಡಿಕೊಂಡು ನಿರ್ಣಯ ತೆಗೆದುಕೊಳ್ಳಲಾಗುವುದು. ಆದ್ದರಿಂದ ದಯವಿಟ್ಟು ತಾವೆಲ್ಲಾ ತಮ್ಮ ತಮ್ಮ ಜಾಗಕ್ಕೆ ವಾಪಸ್ಸು ಹೋಗಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ:-ಮಾನ್ಯ ಅಧ್ಯಕ್ಷರೆ,ಮಾನ್ಯ ಮುಖ್ಯಮಂತ್ರಿ-ಯವರು ಸುಪ್ರೀಂಕೋರ್ಟ್‌ನ ಆದೇಶವನ್ನು ಪಾಲನೆ ಮಾಡಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಈಗ ೫೦,೦೦೦ ಕ್ಯೂಸೆಕ್ಸ್ ನೀರು ಹೊರಟು ಹೋಗಿದೆ. ನಮ್ಮ ಹತ್ತಿರ ಇದ್ದದ್ದೇ ೩೨ ಟಿ.ಎಂ.ಸಿ ನೀರು. ಅದರಲ್ಲಿ ೫೦,೦೦೦ ಕ್ಯೂಸೆಕ್ಸ್ ನೀರು ಹೊರಟು ಹೋಯಿತು ಎಂದರೆ ಸುಮಾರು ೪-೫ ಟಿ.ಎಂ.ಸಿ ನೀರು ಹೊರಟು ಹೋಯಿತು.

ಈಗ ಉಳಿದುಕೊಂಡಿರುವ ನೀರು standing cropಗೂ, ಕುಡಿಯುವ ನೀರಿಗೂ ಸಾಕಾಗುವುದಿಲ್ಲಅಂತಹ ಪರಿಸ್ಥಿತಿ ಇದೆ. ಸುಮಾರು 12-ಲ ಲಕ್ಷ ಎಕರೆ ಬೆಳೆ ಬೆಳೆದಿರುವುದಕ್ಕೆ , ಕುಡಿಯುವ ನೀರಿಗೆ, ದನಕರುಗಳಿಗೆ, ಪ್ರಾಣಿ-ಪಕ್ಷಿಗಳಿಗೆ ನೀರು ಆಗಬೇಕೆಂದರೆ ಕನಿಷ್ಟ 50 ಟಿ.ಎಂ.ಸಿ. ನೀರು ಬೇಕಾಗುತ್ತದೆ. ಆದರೆ ಇವತ್ತು ಎರಡು ವರ್ಷಗಳ ಕಾಲ ಮಳೆ ಬರದೇ ಇದ್ದುದ್ದರಿಂದ,ಜಲಾಶಯಗಳು ತುಂಬದೇ ಇದ್ದುದರಿಂದ,ಇಂತಹ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದೇವೆ. ಯಾವ ಕಾಲದಲ್ಲಿಯೂ ನಾವು ಇಂತಹ ಸಂಕಷ್ಟಕ್ಕೆ ಸಿಲುಕಿಕೊಂಡಿರಲಿಲ್ಲ. ನೀರಿಲ್ಲ, ನೀರು ಬಿಡಬೇಡಿ ಎನ್ನುವುದು ಸರ್ಕಾರಕ್ಕೆ ನಮ್ಮ ಒತ್ತಾಯ. ನಮ್ಮ ಜಲಾಶಯಗಳಲ್ಲಿ ನೀರಿಲ್ಲ. ನೀರು ಬಿಡಬೇಡಿ ನಮ್ಮ ರೈತರಿಗೆ ಅನ್ಯಾಯವಾಗುತ್ತದೆ.

ನಮ್ಮ ರೈತರು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ನಮ್ಮ ರೈತರು ಎರಡು ವರ್ಷಗಳ ಕಾಲ ಬರಗಾಲವನ್ನು ಎದುರಿಸಿದ್ದಾರೆ. ಪಟ್ಟಣಗಳಲ್ಲಿ ಕುಡಿಯುವುದಕ್ಕೆ ನೀರು ಸಹ ಸಿಗುವುದಿಲ್ಲ ಅಂತಹ ಪರಿಸ್ಥಿತಿ ಆಗುತ್ತದೆ. ನಾವು ನೀರನ್ನು ಬಿಡಬೇಡಿ ಎಂದು ಹೇಳಿದ್ದೆವು. ಆದರೂ ಕೂಡ ಸರ್ಕಾರ ಅಧಿಕಾರಕ್ಕೆ ಅಂಟಿಕೊಳ್ಳಬೇಕೆನ್ನುವಂತಹ ಕಾರಣಕೋಸ್ಕರ ನಾವು ಸುಪ್ರೀಕೋರ್ಟಿನ ಆದೇಶವನ್ನು ಪಾಲನೆ ಮಾಡುತ್ತೇವೆಂದು ಹೇಳಿ ೫೦ ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟುಬಿಟ್ಟಿದ್ದಾರೆ.ಸರ್ಕಾರ ರಾಜ್ಯದ ಹಿತವನ್ನು ಕಾಪಾಡುತ್ತದೆ ಎಂದು ಹೇಳುತ್ತಲೇ, ಈ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಈಗ ಸಿಎಂಸಿಯಲ್ಲಿ ೧೨ ಟಿಎಂಸಿ ನೀರನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ.ನನ್ನ ಪ್ರಕಾರ ಸಿಎಂಸಿದು ಆದೇಶವಲ್ಲ. CMCದು, it is not a order. It is not a direction. It is only a recommendation. ಶಿಫಾರಸ್ಸು ಆಗಿದೆ. ಅದನ್ನು ಪಾಲನೆ ಮಾಡಬೇಕೆಂದು ಏನು ಇಲ್ಲ. ಮತ್ತೆ ಇದನ್ನು challenge ಮಾಡಬೇಕು. ಯಾವುದೇ ಕಾರಣಕ್ಕೆ ನಾವು ಇನ್ನೊಂದು ತೊಟ್ಟು ನೀರನ್ನು ಕೊಡುವುದಿಲ್ಲವೆಂದು ಹೇಳಿ ಸರ್ಕಾರ ಒಂದು ನಿಲುವನ್ನು ತೆಗ

ದುಕೊಳ್ಳಬೇಕು.ನಮ್ಮ ಹತ್ತಿರ ನೀರಿಲ್ಲದ ಕಾರಣ ನಾವು ಸಿಎಂಸಿ ಶಿಫಾರಸ್ಸನ್ನು ಪಾಲನೆ ಮಾಡುವುದಿಲ್ಲ. ನಾವು ನೀರನ್ನು ಬಿಡುವುದಕ್ಕೆ ಅಸಮರ್ಥರಾಗಿದ್ದೇವೆ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಿಂದ ನಾವು ನೀರನ್ನು ಕೊಡುವುದಕ್ಕಾಗುವುದಿಲ್ಲ ಎಂದು ಒಂದುಗಟ್ಟಿಯಾದ ನಿಲುವನ್ನು ಈಗಲಾದರೂ ಕೂಡ ಮಾಡಬೇಕು.ಈಗಾಗಲೇ ನಮಗೆ ಅನ್ಯಾಯವಾಗಿದೆ. ಈ ರಾಜ್ಯದ ಜನರ ಹಿತವನ್ನು ಕಾಪಾಡುವುದರಲ್ಲಿ ಈಗಾಗಲೇ ನೀರನ್ನು ಬಿಟ್ಟು ವಿಫಲರಾಗಿದ್ದೀರಿ. ಇನ್ನು ಮುಂದೆಯಾದರೂ ಕೂಡ ಇದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. CRA ಮುಂದೆ ಅರ್ಜಿಯನ್ನು ಹಾಕಿದ್ದೇವೆಂದು ಹೇಳಿದ್ದಾರೆ. ೧೨ಟಿಎಂಸಿ ನೀರನ್ನು ಬಿಡಬಾರದು ಅದನ್ನು ಸ್ಟೇ ಮಾಡಬೇಕೆಂದು ಇದ್ದೇವೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಮತ್ತೆ ಸುಪ್ರೀಂಕೋರ್ಟ್‌ಗೂ ಸಹ ಹೋಗ ಬೇಕಾಗುತ್ತದೆ. ನನ್ನ ತಿಳುವಳಿಕೆಯ ಪ್ರಕಾರ ಸುಪ್ರೀಂಕೋರ್ಟ್‌ಗೆ jurisdiction ಇಲ್ಲವೆಂದು ಇದೆ.Soಅದನ್ನು basic ಆಗಿಮಾಡಿಕೊಂಡು ವಕೀಲರ ಜೊತೆಯಲ್ಲಿ ಚರ್ಚೆ ಮಾಡಿ ಸುಪ್ರೀಂಕೋರ್ಟ್‌ನಲ್ಲಿ ಎಲ್ಲಾ ವಿಚಾರಗಳನ್ನು ಕೂಡ ಪ್ರಶ್ನೆ ಮಾಡಿ ಸಮರ್ಥವಾದಂತಹ ವಾದವನ್ನು ಮಂಡಿಸಬೇಕೆಂದು ನನ್ನ ಸೂಚನೆಯಾಗಿದೆ. ಅದನ್ನು ಮಾಡಲೇಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ಇನ್ನು ಮುಂದೆ ಈಗ ೫೦ ಸಾವಿರ ಕ್ಯೂಸೆಕ್ಸ್ ನೀರು ಹೊರಟು ಹೋಗಿ ರೈತರಿಗೆ ಅನ್ಯಾಯವಾಗಿದೆ. ಮತ್ತೆ ಏನೇ ಪರಿಸ್ಥಿತಿ ಬಂದರೂ ಕೂಡ ಇನ್ನು ಒಂದು ತೊಟ್ಟು ನೀರನ್ನು ಬಿಡುವುದಿಲ್ಲವೆಂದು ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಯಾವ ಕಾರಣಕ್ಕೂ ಕೂಡ ಇನ್ನೊಂದು ತೊಟ್ಟು ನೀರನ್ನು ಬಿಡುವುದಿಲ್ಲವೆಂದು ಆ ಮಾತನ್ನು ಹೇಳಬೇಕು. ನಾವು ಅತ್ಯಂತ ನೋವಿನಿಂದಹೇಳುತ್ತಿದ್ದೇವೆ. ನಮ್ಮ ರೈತರಿಗೆ ಅನ್ಯಾಯವಾಗಿದೆ. ಅನ್ಯಾಯವಾಗಿರುವುದನ್ನು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ ಎನ್ನುವಂತಹ ಮಾತುಗಳನ್ನು ಹೇಳುತ್ತಾ ಆನೋವಾಗಿರುವುದನ್ನು ಯಾವ ರೀತಿಯಾಗಿಯೂ

compensate ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗಿರುವಂತಹ ಲಾಸ್, ಅನ್ಯಾಯ ಕೂಡ,Is a irreparable loss It cannot be compensate is any manner.ಆಮೇಲೆ ನಾಳೆ ದಿನ ಬೆಳೆ ಎಷ್ಟು ನಷ್ಟವಾಗುತ್ತದೆ, ಅದಕ್ಕೆ ಸರ್ಕಾರವು ಪರಿಹಾರವನ್ನುಕೊಡಬೇಕಾಗುತ್ತದೆ. ಅದರ ಬಗ್ಗೆಯೂ ಕೂಡ ಸರ್ಕಾರವು ಗಂಭೀರವಾಗಿ ಯೋಚನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಹಾಗೆ ನೋಡಿಕೊಳ್ಳುವುದು ಕೂಡ ಮಾಡಬೇಕೆಂದು ಹೇಳುತ್ತಾ ನಾವು ಧರಣಿ ಮಾಡುತ್ತಿರುವುದನ್ನು ವಿತ್‌ಡ್ರಾ ಮಾಡುತ್ತೇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು.ಈ ಡಿಸೆಂಬರ್‌ನಲ್ಲಿ ೧೨ ಟಿಎಂಸಿ ನೀರನ್ನು ಬಿಡಬೇಕೆಂದು ಏನು ಹೇಳಿದ್ದಾರೆ ಅದನ್ನು ಯಾವ ಕಾರಣಕ್ಕೂ ಕೂಡ ನೀರನ್ನು ಬಿಡುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಮಾತನ್ನು ಬಹಳ ಸ್ಪಷ್ಟವಾದಂತಹ ಮಾತುಗಳಲ್ಲಿ ಹೇಳಬೇಕು.ಅದಕ್ಕೆ ತಾವು ಬದ್ಧರಾಗಬೇಕೆನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಮ್ಮತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಬೇಕೆಂದು ಮನವಿಯನ್ನು ಮಾಡುತ್ತೇನೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾದ ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಅಧ್ಯಕ್ಷರು:- ಶ್ರೀ ಬಾಲಕೃಷ್ಣರವರೆ ತಾವು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಾನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.ನಾನು ವಿರೋಧಪಕ್ಷದ ನಾಯಕರ ತರಹ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ನಾನು ಸರ್ಕಾರಕ್ಕೆ ಸಹಾಯ ಮಾಡುವುದಕೋಸ್ಕರ ಮಾತನಾಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಾನು ಎರಡು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು :- ನಾನು ಬಾಲಕೃಷ್ಣರವರ ಹೆಸರನ್ನುಕರೆದಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):- ಮಾನ್ಯ ಅಧ್ಯಕ್ಷರೆ,ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅನೇಕ ವಿಘ್ನ–ಗಳನ್ನು ನಿವಾರಣೆ ಮಾಡಿಕೊಳ್ಳುವುದಕೋಸ್ಕರ ಅದರಲ್ಲಿ ಸುಪ್ರೀಂಕೋರ್ಟಿನ ಆದೇಶದ ಪ್ರಕಾರ ೫೦ ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದೇವೆನ್ನುವಂತಹ ಮಾತನ್ನು ಹೇಳಿದರು. ನಾವು ಸುಪ್ರೀಂಕೋರ್ಟುಆದೇಶ ಮಾಡಿದ ಸಂದರ್ಭದಲ್ಲಿಯೇ ನಮ್ಮ ಪಕ್ಷದ ವತಿಯಿಂದ ನಮ್ಮ ನಾಯಕರು One line resolution ಮಾಡಿಎಂದು ಹೇಳಿದರು. ಯಾವುದೇ ಕಾರಣಕ್ಕೆ ನಾವೆಲ್ಲರೂ ನಿಮ್ಮ ಜೊತೆಯಲ್ಲಿ ನಿಲ್ಲುತ್ತೇವೆ.ನೀರನ್ನು ಕೊಡುವುದರಿಂದ ಈ ರಾಜ್ಯದ ಜನರಿಗ ೆ, ಇರುವಂತಹ ಬೆಳೆಗಳಿಗೆ ಮತ್ತು ಕುಡಿಯುವ ನೀರಿಗೆ, ಈ ರಾಜ್ಯದ ಕಾವೇರಿ ಕಣಿವೆಯ ಪ್ರದೇಶಕ್ಕೆತೊಂದರೆಯಾಗುತ್ತದೆಂದು ಹೇಳಿದೆವು. ಬಹುಶ: ಮಾನ್ಯ ಮುಖ್ಯಮಂತ್ರಿಗಳು ಸರ್ಕಾರವನ್ನು ಉಳಿಸಿಕೊಳ್ಳುವುದಕೋಸ್ಕರ ಏನೋ ನೀರನ್ನು ಬಿಟ್ಟು ಸುಪ್ರೀಂಕೋರ್ಟಿನ ಆದೇಶವನ್ನು ಪಾಲನೆ ಮಾಡಿದ್ದಾರೆ. ತದನಂತರ ಸಿಎಂಸಿಯ ಆದೇಶ, ಇದು ಯಾವ ರೀತಿಯಾಗಿದೆ ಎಂದರೆ ಈ ನಮ್ಮ ರಾಜ್ಯವನ್ನು ಏನೋ ಒಂದು ತರಹ ಏನು ಬೇಕಾದರೂ ಮಾಡಬಹುದು ನಮ್ಮ ಮೇಲೆ ಯಾರು ಬೇಕಾದರೂ ಕೂಡ ಬಲಪ್ರಹಾರ ಮಾಡಬಹುದು. ಯಾರು ಏನು ಬೇಕಾದರೂ ಮಾಡಬಹುದು, ಅದನ್ನು ತಡೆದುಕೊಳ್ಳುತ್ತಾರೋ ಬಿಡುತ್ತಾರೋ ಗ ೊತ್ತಿಲ್ಲ. ಇದಕ್ಕೆ ಕಾರಣ ನಮ್ಮಲ್ಲಿ ಇಲ್ಲದಿರುವಂತಹ ಒಗ್ಗಟ್ಟು. ನಮ್ಮಲ್ಲಿ ಇರುವಂತಹ ಕಿತ್ತಾಟ.ನಮ್ಮಲ್ಲಿ ನಾವು ಪಕ್ಷ, ಪಕ್ಷಗಳು ಮಾಡುತ್ತಿರುವಂತಹ ಗ ುದ್ದಾಟವನ್ನು ನಮ್ಮಲ್ಲಿರುವಂತಹ weekness ಎಂದುತಿಳಿದುಕೊಂಡು ಎಲ್ಲರೂ ಕೂಡ ನಮ್ಮ ಮೇಲೆ ಪ್ರಹಾರ ಮಾಡುವುದಕ್ಕೆ ಹೊರಟಿದ್ದಾರೆ.ಈಗ

ಸಿಎಂಸಿಯವರು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ತಿಂಗಳಲ್ಲಿ ನೀರನ್ನು ಬಿಡಬೇಕೆಂದು ಒಂದು ವರದಿಯನ್ನು ಕೊಟ್ಟಿದ್ದಾರೆ.ಅದಕ್ಕಿಂತಲೂ ಹೆಚ್ಚಿನದಾಗಿ ಈಗ ಡಿಸೆಂಬರ್‌ತಿಂಗಳಲ್ಲಿ ೧೨ ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಸರ್ಕಾರದಕಾರ್ಯದರ್ಶಿಗ-ಳು ಹೋಗಿ ಈಗಾಗಲೇ ಸಿಅರ್‌ಎ ಮುಂದೆ ಹೋಗಿಅರ್ಜಿ ಸಲ್ಲಿಸಿದ್ದಾರೆ. ನೀರನ್ನು ಬಿಡುವುದಕ್ಕೆಆಗುವುದಿಲ್ಲವೆಂದು ನಮಗೆ ತೊಂದರೆಯಾಗುತ್ತದೆ ಎಂದುಅವರಿಗೆ ಮನವರಿಕೆಯನ್ನು ಮಾಡಿಕೊಟ್ಟಿದ್ದಾರೆ.ನಾನು ಸನ್ಮಾನ್ಯ ವಿರೋಧಪಕ್ಷದ ನಾಯಕರು ಮತ್ತುಕಾಂಗ್ರೆಸ್ಸಿನ ಎಲ್ಲಾ ನಾಯಕರಲ್ಲಿ ಮನವಿಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಈಗ ಬದ್ಧತೆಯನ್ನು ತೋರಿಸಬೇಕಾಗಿರುವುದು ಬಿಜೆಪಿಯವರಲ್ಲ, ನಿಜವಾದಂತಹ ಬದ್ಧತೆಯನ್ನು ಕಾಂಗೆಸ್‌ನವರು ತೋರಿಸಬೇಕಾಗಿದೆ. ಅವರು ನಿಜವಾಗಿಯೂ ಕಾವೇರಿ ಕಣಿವೆಯ ಪ್ರದೇಶದವರ ಮೇಲೆ ನಿಜವಾಗಲೂ ಬದ್ಧತೆ ಇದ್ದರೆ ತಮಿಳು ನಾಡಿನವರು ಯಾವ ರೀತಿಯಾಗಿ ಪ್ರಧಾನಮಂತ್ರಿಗಳ ಮೇಲೆ ಒತ್ತಡವನ್ನು ಹೇರಿ ನೀರನ್ನು ಬಿಡಿಸಿಕೊಂಡು ಹೋಗು ತ್ತಾರೋ ಅದೇ ರೀತಿಯಾಗಿ ಮಾಡಬೇಕು. ಈಗ ಏನಾಗಿದೆ ಎಂದರೆ ಸಿಎಂಸಿ ವರದಿಯ ಪ್ರಕಾರ ೧೨ ಟಿಎಂಸಿ ನೀರನ್ನು ಬಿಡಬೇಕೆಂದು ಇವರು ಸುಪ್ರೀಂಕೋರ್ಟಿಗೆ ಹೇಳುತ್ತಾರೆ.ಅವರುಸುಪ್ರೀಂಕೋರ್ಟಿನಲ್ಲಿ ಅದೇ ವಾದವನ್ನು ಮಾಡುತ್ತಾರೆ.ಸಿಎಂಸಿಯವರು ವರದಿಯನ್ನು ಕೊಟ್ಟಿದ್ದಾರೆ ನೀವು ೧೨ ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಿದಾಗ ಅವರು ೧೨ ಟಿಎಂಸಿ ನೀರು ಬೇಡ ೧೦ ಟಿಎಂಸಿ ನೀರು ಬಿಡಿ ಎಂದು ಸುಪ್ರೀಂಕೋರ್ಟು ಆದೇಶವನ್ನು ಮಾಡುತ್ತದೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು:- ಮಾನ್ಯ ಟಿ.ಬಿ.ಜಯಚಂದ್ರರವರೆ,Please ಮಾನ್ಯ ಬಾಲಕೃಷ್ಣರವರು ಮಾತನಾಡಲಿ.

ಶ್ರೀ ಹೆಚ್.ಸಿ ಬಾಲಕೃಷ್ಣ:-ಒಂದು ನಿಮಿಷ ತಾಳಿ ನಾನೂಅದನ್ನೇ ಹೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ:- ನೀವು ಏನು ಬೇಕಾದರೂ ಮಾತನಾಡಿ.

ಶ್ರೀ ಹೆಚ್ ಸಿ.ಬಾಲಕೃಷ್ಣ:- ಸಿಎಂಸಿಯನ್ನು ಮಾಡಿರುವುದು ಸುಪ್ರೀಂಕೋರ್ಟು.ಆದರೆ ಅಲ್ಲಿರುವಂತಹ ಅಧಿಕಾರಿಗಳು ಯಾರು?ಅಲ್ಲಿ ಯಾವ ಅಧಿಕಾರಿಗಳು ಇದ್ದಾರೆ ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಇದಕ್ಕೆ ಯಾವುದಾದರೂ ನೀತಿನಿಯಮಗಳು ಇದೆಯೇ?

ಅಧ್ಯಕ್ಷರು:- ನೀವು ಆಮೇಲೆ ಮಾತನಾಡಿ. ನೀವು ಮಾತನಾಡುವುದಕ್ಕೆ ನಾನು ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ :ಒಂದು ನಿಮಿಷ, ನಾನು ಮಾತನಾಡಿದ ನಂತರ ಅವರು ಮಾತನಾಡಲಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- One line resolution ಮಾಡಿ ಎಂದು ತಂದವರು ಯಾರು?

ಶ್ರೀ ಎನ್.ಸಂಪಂಗಿ:- ಕೇಂದ್ರಸರ್ಕಾರದ ಬಗ್ಗೆ ಏಕೆ ಮಾತನಾಡುವುದಕ್ಕೆಹೋಗುತ್ತೀರಿ? ಮೊದಲು ರಾಜ್ಯದ ಹಿತದ ಬಗ್ಗೆ ನೋಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :-ಅವರು ಸಂಸತ್ ಸದಸ್ಯರಾಗಿದ್ದರು,ಅವರ ಜೊತೆಯಲ್ಲಿ ಯಾರು ಹೋಗಿದ್ದರು?ನೀವು ಕಾಂಗ್ರೆಸ್ಸಿನವರಿಗೆ ಪಾಠ ಹೇಳ-ಬೇಕಾಗಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು. ನಾವು ಮಾತನಾಡುವಾಗ ಏಕೆಗಲಾಟೆ ಮಾಡುತ್ತೀರಿ?ಬೇಕಾದರೆ ಅವರ ಅಭಿಪ್ರಾಯವನ್ನು ಅನಂತರ ಹೇಳಲಿ.

ಶ್ರೀ ಟಿ.ಬಿ.ಜಯಚಂದ್ರ:- ಹೇಳುತ್ತೇನೆ.

ಅಧ್ಯಕ್ಷರು:- ಆಯಿತು ತಾವು ಬೇಗ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ನಾನು ಹೇಳುವುದನ್ನು ಮೊದಲುಕೇಳಿ.

(ಗೊಂದಲ)

ಅಧ್ಯಕ್ಷರು:-ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಂಡೆಪ್ಪ ಖಾಶೆಂಪೂರ್:-ಸ್ವಾಮಿ, ಹೊಂದಾಣಿಕೆಯನ್ನು ಮುಖ್ಯಮಂತ್ರಿಗಳು ಹೇಳಿದರು. ಸೆಪ್ಟೆಂಬರ್ ತಿಂಗಳಲ್ಲಿ ಕೊಟ್ಟಂತಹ ಸಿಎಂಸಿಈಗ ತಿರುಗೇಟಾಗಿದೆ. ಯಾರ influence ನಿಂದ ಈ ರೀತಿಯಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದರ ಬಗ್ಗೆಯೇ ಇಲ್ಲಿ ಚರ್ಚೆ ನಡೆಯುತ್ತಿದೆ. ಆಯಿತು ಮಾನ್ಯ ಸದಸ್ಯರು ಏನು ಹೇಳುತ್ತಾರೆ ಅದನ್ನು ಕೇಳಿ.

ಅಧ್ಯಕ್ಷರು:-ದಯವಿಟ್ಟು ಕುಳಿತುಕೊಳ್ಳಿ. ತಾವು ಸಚೇತಕರಾಗಿ ಈ ರೀತಿಯಾಗಿ ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಈಗ ನಾವು ಯಾರ ಜೊತೆಯಲ್ಲಿಯೂಒಳಒಪ್ಪಂದವನ್ನು ಮಾಡಿಕೊಂಡಿಲ್ಲ.ಅವರ್ಯಾರೋ ಒಪ್ಪಂದ-ವನ್ನು ಮಾಡಿಕೊಂಡಿದ್ದಾರೆಂದು ಮಾಧ್ಯಮಗಳಲ್ಲಿಯೆ ಬರುತ್ತಿದೆ,ಅದನ್ನು ಅವರೇ ಹೇಳುತ್ತಾರೆ.ನಾವು ಯಾರ ಜೊತೆಯಲ್ಲಿಯೂ ಒಳ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ. ನೀವು ಹೇಳುವಾಗ ನಾನು ಕೇಳಿದ್ದೇನೆ. ನಾನು ಹೇಳುವಾಗ ತಾವೂ ಕೇಳಿ. ಒಂದು ನಿಮಿಷ,ತಾವು ಕುಳಿತುಕೊಂಡು ನಾನು ಹೇಳುವುದನ್ನು ಕೇಳಿ. ನೀವು ಏತಕ್ಕಾಗಿ ಎದ್ದುನಿಂತುಕೊಳ್ಳುತ್ತೀರಿ?

ಅಧ್ಯಕ್ಷರು:-ಅವರು ಮಾತನಾಡುವುದಕ್ಕೆ ಬಿಡದೆ ಇದ್ದರೆ ಹೇಗೆ? Please,ಮಾನ್ಯ ತನ್ವೀರ್ ಸೇಠ್‌ರವರೆ,ತಾವು ಆಮೇಲೆ ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ-ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಅದು ಸಿಎಂಸಿ ಮಾಡಿರುವಂತಹ ಶಿಫಾರಸ್ಸು ಹೊರತು ಆದೇಶವಲ್ಲ ಎಂದು ಹೇಳಿದರು. ಈಗ ಅವರು ಸಿಆರ್‌ಎ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.ಇದು ಯಾರ ಕಂಟ್ರೋಲ್‌ನಲ್ಲಿದೆ? ಪ್ರಧಾನಮಂತ್ರಿಗಳ ಕಂಟ್ರೋಲ್‌ನಲ್ಲಿ ಇರುತ್ತದೆ.ತಾವು ದಯಮಾಡಿ ಈ ರಾಜ್ಯದಲ್ಲಿರುವಂತಹ ಕೇಂದ್ರದ ಮಂತ್ರಿಗಳು ತಾವು ಎಲ್ಲರೂ ಹೋಗಿ ನಮ್ಮ ಪರಿಸ್ಥಿತಿ ಹೀಗೆ ಇದೆ ಒತ್ತಡವನ್ನುತೆಗೆದುಕೊಂಡು ಬನ್ನಿ. ಇಲ್ಲಿ ಸುಮ್ಮನೆ ಮಾತನಾಡಿದರೆ ಏನು ಪ್ರಯೋಜನವಾಗುತ್ತದೆ?

ಶ್ರೀ ಸಿದ್ದರಾಮಯ್ಯ (ವಿರೋಧಪಕ್ಷದ ನಾಯಕರು):- ಮಾನ್ಯ ಬಾಲಕೃಷ್ಣರವರೆ, ಈ ಸಿಎಂಸಿ ಮತ್ತು ಸಿಆರ್‌ಎ Constituted a Supreme Court. ಇದನ್ನು ತಾವು ಮೊದಲು ತಿಳಿದುಕೊಳ್ಳಬೇಕು. Is not a constitutedGovernment of India. It is a Quasi-judicial body constituted by Supreme Court of India. ಆ ಬಗ್ಗೆ ನಿಮ್ಮ ಗಮನದಲ್ಲಿದ್ದರೆ ಸಾಕು.

ಶ್ರೀ ಹೆಚ್.ಸಿ.ಬಾಲಕೃಷ್ಣ : ಆ ವಿಚಾರವು ನಮಗೂ ಕೂಡಗೊತ್ತಿದೆ.ಆದರೆ ಇಲ್ಲಿ ನಿರಂತರವಾದ ದಾಳಿ ನಮ್ಮ ಮೇಲೆ ನಡೆಯುತ್ತಿದೆ. ತಮ್ಮ ಕೇಂದ್ರ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ.. ಈಗ ಪ್ರಧಾನಮಂತ್ರಿಗಳು ಇದಕ್ಕೆ ಅಧ್ಯಕ್ಷರು. ನೀವು ಇಲ್ಲಿ ಮಾತನಾಡುವ ಬದಲು ಅಲ್ಲಿ ಹೋಗಿ ಮಾತನಾಡಿ. ಇಲ್ಲಿ ನೀವು ಮಂಡನೆ ಮಾಡುವುದರ ಬದಲು ಅಲ್ಲಿ ಹೋಗಿ ಚರ್ಚೆ ಮಾಡಿ..

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):ಬಾಲಕೃಷ್ಣರವರೆ, upper Krishna ವಿಚಾರದಲ್ಲಿ gate ಬಗ್ಗೆ ದೇವೇಗೌಡರು ಏನು ಮಾಡಿದರು? ಆಂಧ್ರದವರಿಗೆ ಸಹಾಯ ಮಾಡಲಿಕ್ಕೆ ದೇವೇಗೌಡರು ಏನು ಮಾಡಿದರು, ಇಂಥದ್ದು ಬೇಡ. ಕಾನೂನು ಪ್ರಕಾರ ಮಾತನಾಡಿ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಕುಳಿತುಕೊಳ್ಳಿ ಪ್ಲೀಸ್. ಇದನ್ನು ಮುಕ್ತಾಯ ಮಾಡೋಣ, ಕುಳಿತುಕೊಳ್ಳಿ. ನೀವು ಮುಗಿಸಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಅಧ್ಯಕ್ಷರೆ, ನೀವು ನಮಗೆ ರಕ್ಷಣೆ ಕೊಡದಿದ್ದರೆ ನಾವು ಹೇಗೆ ಮಾತನಾಡುವುದು? ಇವರೆಲ್ಲಾ ಮಾತನಾಡುವಾಗ ನಾವು ಸುಮ್ಮನೆ ಕುಳಿತುಕೊಂಡಿದ್ದೆವು.ನಾನು ಮಾತನಾಡುವಾಗ ಇವರು ಈಗ ಗಲಾಟೆ ಮಾಡುತ್ತಿದ್ದಾರೆ? ನಾವು ರಾಜಕೀಯ ಮಾಡುತ್ತಿಲ್ಲ ಇರುವ ವಿಚಾರದ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ:- ಕೇಂದ್ರ ಸರ್ಕಾರದ ಜವಾಬ್ದಾರಿ ಏನು ಎಂಬುದನ್ನು ಅರ್ಥ ಮಾಡಿಕೊಂಡು ಮಾತನಾಡಲಿ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ದಯಮಾಡಿ ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಲಿ. ಜವಾಬ್ದಾರಿ ಸ್ಥಾನದಲ್ಲಿದ್ದಾರೆ ಸರಿಯಾಗಿ ಅರ್ಥ ಮಾಡಿಕೊಂಡು ಮಾತನಾಡಲಿ, ಸುಮ್ಮನೆ ಬೇಕಾಬಿಟ್ಟಿ ಮಾತನಾಡುವುದಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:ಅಧ್ಯಕ್ಷರೆ, ಈಗ CRA ಯಾರು ಕಂಟ್ರೋಲ್‌ನಲ್ಲಿದೆ ಎಂದು ನೀವೇ ಹೇಳಿ.

ಅಧ್ಯಕ್ಷರು:- ನೀವು ಮಾತನಾಡಿ ಮುಗಿಸಿ, ಮಧ್ಯೆ ವಿಷಯಾಂತರ ಮಾಡುವುದು ಬೇಡ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇವರು ಅಲ್ಲಿ ಹೋಗಿ ಮಾತನಾಡಲಿ,ಇಲ್ಲಿ ಏಕೆ ಸುಮ್ಮನೆ ವಾದ ಮಂಡಿಸುವುದು? ಇಲ್ಲಿ ಕಲಾಪ ಏಕೆ ಹಾಳು ಮಾಡುವುದು? ಇಲ್ಲಿ ತೋರಿಸುವ ಬದ್ಧತೆ ಅಲ್ಲಿ ತೋರಿಸಲಿ ಎಂದು ಕಾಂಗ್ರೆಸ್ ಪಕ್ಷದವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾವೇನು ಅವರ ಬಗ್ಗೆ ಟೀಕೆ ಮಾಡುತ್ತಿಲ್ಲ. ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ನೀವು ಇಲ್ಲಿ ತೋರಿಸುವ ಬದ್ಧತೆಯನ್ನು ಅಲ್ಲಿ ತೋರಿಸಿ, ನೀವು ನಾಲ್ಕು ಜನ ಸಚಿವರಿದ್ದೀರಿ. ನಿಮ್ಮದು ದೊಡ್ಡ ಸರ್ಕಾರ ಅಲ್ಲಿದೆ. ವಿರೋಧ ಪಕ್ಷದವರು ಅಲ್ಲಿ ಹೋಗಿ ನಿಮ್ಮ ಬದ್ಧತೆಯನ್ನು ತೋರಿಸಿ ಎಂದು ಹೇಳುತ್ತಿದ್ದೇವೆ. ಈಗ ಕುಡಿಯಲಿಕ್ಕೆ ನೀರು ಬಿಟ್ಟಿದ್ದಾರೆ. ನಮಗೆ ಬಹುಶ: ಕುಡಿಯಲಿಕ್ಕೆ ನೀರು ಬಿಟ್ಟರೆ ಆ ಭಾಗದ ಜನಕ್ಕೆ ಬೆಳೆ ಬೆಳೆಯಲು ನೀರು ಸಿಗುವುದಿಲ್ಲ. ನಾವು ಈಗಾಗಲೇ ಒಂದು ಎಕರೆಗೆ ೨೫,೦೦೦-೦೦ ರೂಪಾಯಿಗಳ crop compensation ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇವೆ. ಆದ್ದರಿಂದ ಅಧ್ಯಕ್ಷರ ಮೂಲಕತಮ್ಮಲ್ಲಿ ಒತ್ತಾಯ ಮಾಡುತ್ತೇವೆ.

ಶ್ರೀ ಪ್ರಕಾಶ್ ಹುಕ್ಕೇರಿ : ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ಕಾವೇರಿ ಬಗ್ಗೆ ಎರಡು ದಿವಸಗಳವರೆಗೆ ಚರ್ಚೆಯಾಗಿದೆ. ಹಾಗಾಗಿ ಇದನ್ನು ಮುಕ್ತಾಯ ಮಾಡೋಣ. ಉತ್ತರ ಕರ್ನಾಟಕದ ವಿಚಾರದ ಬಗ್ಗೆ ಚರ್ಚೆತೆಗೆದುಕೊಳ್ಳೋಣ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್). ಪಕ್ಷದ ಹಲವು ಮಾನ್ಯ ಸದಸ್ಯರು ಎದ್ದುನಿಂತು ಮಾತನಾಡುತ್ತಿದ್ದರು)

ಶ್ರೀ ಹೆಚ್.ಸಿ.ಬಾಲಕೃಷ್ಣ:ನಿಮ್ಮ ವಿರೋಧ ಪಕ್ಷದ ನಾಯಕರು ಕಾವೇರಿ ವಿಚಾರವನ್ನು ಚರ್ಚೆಮಾಡುವುದು ಬೇಡ ಎಂದು ಹೇಳಲಿ, ನಾವು ಮಾತನಾಡುವುದಿಲ್ಲ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವರು ನಮಗೆ ಹೇಳಲಿ, ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು:- ಈ ರೀತಿ ನೀವು ನೀವೆ ಮಾತನಾಡಿದರೆ ಹೇಗೆ? ಕುಳಿತುಕೊಳ್ಳಿ, ಪ್ಲೀಸ್.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನಿಮ್ಮ ಲೀಡರ್‌ಗೆ ಹೇಳಿ,ನಾವು ಕುಳಿತುಕೊಳ್ಳುತ್ತೇವೆ. ಅಧ್ಯಕ್ಷರೆ ಈಗ ಕಾವೇರಿ ವಿಚಾರ ಚರ್ಚೆ ಮಾಡುವುದು ಬೇಡ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆತೆಗೆದುಕೊಳ್ಳೋಣ ಎಂದು ಹೇಳಿಬಿಡಲಿ, ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ಆ ರೀತಿಅವರಿಂದ ಹೇಳಿಸಿ.

(ಗೊಂದಲ)

ಅಧ್ಯಕ್ಷರು: ಬಿ.ಸಿ.ಪಾಟೀಲ್ ನೀವು ಕುಳಿತುಕೊಳ್ಳಿ. ಹುಕ್ಕೇರಿಯವರೇ, ನೀವು ನಿಮ್ಮ ಸ್ಥಾನದಲ್ಲಿ ನಿಂತು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :ಅಧ್ಯಕ್ಷರೆ, ಈಗ ಎರಡು ನಿಮಿಷದಲ್ಲಿ ನನ್ನ ಮಾತನ್ನುಮುಗಿಸುತ್ತೇನೆ. ನಾವು ರೈತರಿಗೆ ೨೫೦೦೦-೮೦ ರೂಪಾಯಿಗಳವರೆಗೆ crop compensation ಕೊಡಬೇಕೆಂದು ಕೇಳುತ್ತಿದ್ದೇವೆ. ಈಗೇನಾಗುತ್ತದೆ ಎಂದರೆ CRA ಇವರ ಆದೇಶದ ಮೇಲೆ ಸುಪ್ರೀಂಕೋರ್ಟ್ ಪುನ: ನೀರು ಬಿಡಲಿಕ್ಕೆ ಹೇಳುತ್ತದೆ. ಹಾಗಾಗಿ ಆ ರೀತಿ ಯಾವುದೇ ಕಾರಣಕ್ಕೂ ಮಾಡುವುದು ಬೇಡ. ಯಾವುದೇ ಕಾರಣಕ್ಕೂ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಒಂದು ಹನಿ ನೀರು ಬಿಡುವುದಕ್ಕಾಗುವುದಿಲ್ಲ ಎಂಬ ನಿಲುವನ್ನು ತೆಗೆದು-ಕೊಳ್ಳಬೇಕು. ನಾವು ಅವರ ಜೊತೆ ಇರುತ್ತೇವೆಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಲಿಕ್ಕೆ ನಿಲುವಳಿ ಸೂಚನೆ ತಂದಿದ್ದೇವೆ.ಚರ್ಚೆ ಮಾಡಲಿಕ್ಕೆ ನಾವು ತುದಿಗಾಲಿನಲ್ಲಿ ನಿಂತಿದ್ದೇವೆ. ಹಾಗಾಗಿ ಇವತ್ತು ಕಾವೇರಿ ವಿಚಾರದ ಬಗ್ಗೆ ಧರಣಿ ಮಾಡುತ್ತಿರುವ

ಕಗ್ಗಂಟನ್ನು ಬಿಡಿಸಬೇಕು ಎಂಬ ಕಾರಣಕ್ಕೋಸ್ಕರ ತಮ್ಮ ಚೇಂಬರ್‌ಗೆ ಬಂದು ಮುಕ್ತವಾಗಿ ಚರ್ಚೆಯನ್ನು ಮಾಡಿದ್ದೇವೆ. ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ, ಹೇಳುವುದನ್ನು ಕೇಳುವುದು ಸ್ವಲ್ಪ ಕಲಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ನೀವು ನೀವೇ ಈ ರೀತಿ ಮಾತನಾಡಿದರೆ ಹೇಗೆ? ಇದನ್ನು ಮುಕ್ತಾಯಗೊಳಿಸೋಣ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪುರ್ : ನೀವು ಏಕೆ ಆ ರೀತಿ ಮಾತನಾಡುತ್ತಿದ್ದೀರಿ? ಕಾವೇರಿ ವಿಚಾರ ಚರ್ಚೆ ಬೇಡ ಎಂದರೂಅವರು ಆ ವಿಚಾರ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :ನಮಗೂ ಇದೆ, ದಯಮಾಡಿ ಮಾತನಾಡುವುದನ್ನು ಕೇಳುವಂಥ ಸೌಜನ್ಯ ಕಲಿತುಕೊಳ್ಳಿ.

ಶ್ರೀ ಬಂಡೆಪ್ಪ ಖಾಶೆಂಪುರ್ : ನಮಗೂ ಸೌಜನ್ಯ ಇದೆ.

ಅಧ್ಯಕ್ಷರು :ದಯಮಾಡಿ ಕುಳಿತುಕೊಳ್ಳಿ, ಸವದಿಯವರೆ, ಚರಂತಿಮಠರವರೆ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :-ಅಧ್ಯಕ್ಷರೆ, ಕಾವೇರಿ ವಿಚಾರದಲ್ಲಿ ವಿದ್ಯಮಾನಗ ಳೇನಿತ್ತು, ನಾವು ಧರಣಿ ಮಾಡಿದ್ದು ಏಕೆ? ತಮಗೆ ಏನು ಒತ್ತಡ ಇತ್ತು ಎಂಬುದನ್ನು ಮುಖ್ಯಮಂತ್ರಿಗಳು ಸದನದಲ್ಲಿ ಇವತ್ತು ಮಂಡಿಸಿದ್ದಾರೆ. ಅದನ್ನು ಮಂಡಿಸುವಂಥ ಸಂದರ್ಭದಲ್ಲಿ ಅವರು ಹೇಳಿರುವಂಥದ್ದು CMCಯಲ್ಲಿ ೧೦೦ TMC ಬಿಡುವಂತಾಗಿದೆ. CRA ಗೆ ಅಪೀಲ್ ಮಾಡಿದ್ದೇವೆ. ಅವೆಲ್ಲದಕ್ಕಿಂತ ಹೆಚ್ಚಾಗಿ ಇವತ್ತು ಸುಪ್ರೀಂಕೋರ್ಟ್‌ನಲ್ಲಿ ಕೂಡ ಕೇಸ್ ಬರುತ್ತಿದೆ. ಸುಮಾರು ೨೦೦ ವರ್ಷಗಳ ಇತಿಹಾಸವಿರುವಂಥ ಈ ಕಾವೇರಿ ನದಿ ವಿವಾದಕ್ಕೆ ಬಹುಶ: ಇವತ್ತು

ಕೊನೆ ಹಾಡುವಂಥ ಸಂದರ್ಭ ಬಂದಿದೆ ಎಂದು ನನಗೆ ಅನ್ನಿಸುತ್ತದೆ. ಸರ್ವೋಚ್ಚ ನ್ಯಾಯಾಲಯ ಮೊನ್ನೆ ತೀರ್ಪನ್ನು ಕೊಡುವಾಗ ಕೇಂದ್ರ ಸರ್ಕಾರಕ್ಕೆ ಒಂದು ತಾಕೀತನ್ನು ಮಾಡಿತ್ತು. Government of India shall notify ಎನ್ನುವಂಥ ಮಾತನ್ನು ಹೇಳಿತ್ತು. ಆ ಹಿನ್ನೆಲೆಯಲ್ಲಿ CMC ಸಭೆಗೆ ನಮ್ಮ ಮುಖ್ಯ ಕಾರ್ಯದರ್ಶಿಯವರು ಹೋದಂಥ ಸಂದರ್ಭದಲ್ಲಿ ಅವರಿಗೆ specific ಆಗಿ ನಿರ್ದೇಶನ ಕೊಟ್ಟಿದ್ದಾರೆ. ಡಿಸೆಂಬರ್ ಒಳಗಾಗಿ ನಾವು ನೋಟಿಫಿಕೇಷನ್ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದಾರೆ. ನೋಟಿಫಿಕೇಷನ್ ಮಾಡುತ್ತೇವೆಂದು CMC ಅಧ್ಯಕ್ಷರಾಗಿ, ಕೇಂದ್ರ ಸರ್ಕಾರದ ಕಾರ್ಯದರ್ಶಿಯಾಗಿ ಅವರು ಒಪ್ಪಿಗೆಯನ್ನು ಕೊಟ್ಟ ಮೇಲೆ ಬಹುಶ: ಅದೇ Statementಅನ್ನು ಇವತ್ತು Supreme Court ನ ಮುಂದೆ ಇಟ್ಟಾಗ ಅವರು ಅನಿವಾರ್ಯವಾಗಿ ಹೋಗುತ್ತಾರೆ, ಇವತ್ತು final notification ಬರುತ್ತದೆ. ಆ Final notification ಬಂದಾಗ ಶ್ರೀಮತಿಜಯಲಲಿತಾರವರ ಪಾತ್ರವೂ ಇರುವುದಿಲ್ಲ. ಜಗದೀಶ್ ಶೆಟ್ಟರ್‌ರವರದು ಹಾಗೂ ಬಸವರಾಜ ಬೊಮ್ಮಾಯಿಯವರ ಪಾತ್ರಗಳೂ ಕೂಡ ಇರುವುದಿಲ್ಲ. ಆಗ ಸಂಪೂರ್ಣವಾಗಿ ಕಾವೇರಿ ಮಾನಿಟರಿಂಗ್ ಬೋರ್ಡ್‌ಅಸ್ತಿತ್ವಕ್ಕೆ ಬರುತ್ತದೆ. ತುಂಗಭದ್ರಾ ಬೋರ್ಡ್ ರೀತಿ ಕಾವೇರಿ ಮಾನಿಟರಿಂಗ್ ಬೋರ್ಡ್‌ಅಸ್ತಿತ್ವಕ್ಕೆ ಬರುತ್ತದೆ.Final notification ಬರುವಾಗ ಒಂದೇ ಒಂದು clarificationಅನ್ನು ನಾನು ಕೇಳುವಂಥದ್ದು. ಅದನ್ನು ನಾವು ಸುಪ್ರೀಂಕೋರ್ಟ್‌ನಲ್ಲಿ ವಾದ ಮಾಡುವಾಗ ಫೈನಲ್ ನೋಟಿಫಿಕೇಷನ್ ಬರುವ ಪೂರ್ವದಲ್ಲಿ ಅದರ ಸಾಧಕ-ಬಾಧಕಗಳ ಬಗ್ಗೆ ಕೇಂದ್ರ ಸರ್ಕಾರ ಯೋಚನೆ ಮಾಡಿದೆಯೇ? ಸುಪ್ರೀಂಕೋರ್ಟ್ ಮುಂದೆ ಇವತ್ತು appear ಆಗುತ್ತಿರುವ ನಮ್ಮ advocate ರವರಿಗೆ ಸಲಹೆ ಏನು ಕೊಟ್ಟಿದ್ದೀರಿ? ಇವತ್ತು ಇತ್ಯರ್ಥವಾಗುತ್ತದೆಂದು ಈಗಾಗಲೇ ಸುಪ್ರೀಂಕೋರ್ಟ್ ಹೇಳಿದೆ. Shall ಎನ್ನುವಂಥ

ಮಾತನ್ನು ಹೇಳಿದೆ. ಅದಕ್ಕೆ ಕೇಂದ್ರ ಸರ್ಕಾರ ಸಹ ಒಪ್ಪಿದೆ ಅಂದಾಗ ನಮ್ಮ ಸರ್ಕಾರದ ಉತ್ತರ ಏನು ಎಂಬುದು ಬಹಳ ಮುಖ್ಯ- ವಾಗುತ್ತದೆ. ಆ ವಿಚಾರದ ಬಗ್ಗೆ ನೀವು ಮಾತನಾಡುವಾಗ ಯಾವುದನ್ನೂ ಕೂಡ clarify ಮಾಡಲಿಲ್ಲ ಎನ್ನುವಂಥದ್ದು ಮುಖ್ಯ ವಿಚಾರ. ಹಾಗಾಗಿ ಕಾವೇರಿ ಕೊಳ್ಳದ ರೈತರ ಹಿತದೃಷ್ಟಿಯಿಂದ ಸುಮಾರು ೨೦೦ ವರ್ಷಗಳ ಜಗಳ ಅಂತಿಮವಾಗುವಂಥ ಸಂದರ್ಭದಲ್ಲಿ ಸರ್ಕಾರ ಅತ್ಯಂತ ಜಾಗರೂಕತೆಯಿಂದ ಹೆಜ್ಜೆಯನ್ನು ಇಡಬೇಕೆಂಬ ದೃಷ್ಟಿಯಿಂದ ನಾನು ಹೇಳುವುದಕ್ಕೆ ಹೊರಟಿದ್ದೇನೆ. ನಾವು ಇದರಲ್ಲಿ ರಾಜಕಾರಣ ಮಾಡಬೇಕೆಂಬ ಪ್ರಶ್ನೆಯೇ ಇಲ್ಲ. ಕಾಂಗ್ರೆಸ್ ಪಕ್ಷದವರು ರಾಜಕಾರಣ ಮಾಡುವ ಅವಶ್ಯಕತೆಯೇ ಇಲ್ಲ. ಈಗ ಯಾರಾದರೂ ಮಾತನಾಡುವಾಗ ನಮಗೆ ಯಾರಿಂದಲೂ ಸಲಹೆಗಳು ಬೇಕಾಗಿಲ್ಲ. ಕಾವೇರಿ ನದಿಯಾಗಲಿ, ಕೃಷ್ಣಾನದಿಯಾಗಲಿ ನಾವು ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇವತ್ತು ಸರ್ಕಾರಕ್ಕೆ ಆ ಬಗ್ಗೆ ಮಾಹಿತಿಯನ್ನು ಕೊಡಲಿಕ್ಕೆ ಬದ್ಧರಾಗಿದ್ದೇವೆ.

ಏಕೆಂದರೆ ನಾವು ವಿರೋಧಪಕ್ಷದಲ್ಲಿ ಕುಳಿತಿರುವುದು ಈಗ. ನಾವು ಕೂಡ ೪೦ ವರ್ಷಗಳ ಆಡಳಿತವನ್ನು ಮಾಡಿದ್ದೇವೆ. ಯಾರ್ಯಾರು ಆಡಳಿತವನ್ನು ಮಾಡುವಂತಹ ಕಾಲದಲ್ಲಿ ಏನೇನು ಮಾಡಿದ್ದಾರೆಂಬ ವಿಚಾರವನ್ನು ಚರ್ಚೆ ಮಾಡಿದರೆ ಅದು ರಾಜಕೀಯವಾಗುತ್ತದೆ. ಆ ಕಾರಣಕ್ಕೋಸ್ಕರ ಅದ್ಯಾವುದನ್ನೂಪ್ರಸ್ತಾಪ ಮಾಡದೆ ಮುಖ್ಯವಾಗಿfinal notification ಮಾಡುವ ಸಂದರ್ಭದಲ್ಲಿ ತಮ್ಮ ಒಪ್ಪಿಗೆಯಿದೆಯೇ ಅಥವಾ ಇಲ್ಲವೇ? ಇದರ ಸಾಧಕ-ಬಾಧಕವೇನು? ನಮ್ಮ ಬೇಡಿಕೆ ಇದ್ದುದ್ದು ೪೭೧ ಟಿ.ಎಂ.ಸಿ ನೀರು ಬೇಕೆಂದು. ೫೪% ನೀರು ಕರ್ನಾಟಕದಲ್ಲಿ generate ಆಗುವಂತಹದ್ದು. ನಮಗೆ ಬಂದಿರುವಂತಹ allocation ಕೇವಲ ೨೭೦ ಟಿ.ಎಂ.ಸಿ. ಇದರ ಜೊತೆಗೆ ಇದೇ ಕಾವೇರಿ ಟ್ರಿಬ್ಯೂನಲ್ ಮುಂದೆ clarificatoryorders ಇವತ್ತು pending ಇದೆ. ಸುಪ್ರೀಂಕೋರ್ಟ್‌ನಲ್ಲೂ ಕೂಡ original suit pending ಇದೆ.

ಇಂತಹ ಸಂದರ್ಭದಲ್ಲಿ final notification ಬಂದಾಗ Cauvery River Authority ಮುಂದಿರುವ clarificatory order ಗಳಿಗೆ ಏನಾಗುತ್ತವೆ,SupremeCourt ನಲ್ಲಿರುವಂತಹ original suit ಗೆ ಏನಾಗುತ್ತದೆ, ಕರ್ನಾಟಕದ ಪಾಲಿಗೆ ಇದರಿಂದ ಏನಾದರೂ ಧಕ್ಕೆ ಆಗುತ್ತದೆಯೇ ಎನ್ನುವುದನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದರಲ್ಲಿ ನಾವು ಟ್ರಿಬ್ಯೂನಲ್‌ಗೆ ಹೋಗಬೇಕಾದಾಗ ಸಾಧಕ ಮತ್ತು ಬಾಧಕ ಎರಡೂ ಇರಬಹುದು. ಸಾಧಕ ಎನ್ನುವ ಜೊತೆಗೆ ಬಾಧಕ ಏನಿದೆಯೆನ್ನುವ ಬಗ್ಗೆ ಸರ್ಕಾರ ಗಮನಹರಿಸಿದೆಯೇ ಎನ್ನುವುದನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹೆಚ್.ಸಿ.ಬಾಲಕೃಷ್ಣರವರು ಮತ್ತು ಮಾನ್ಯ ಟಿ.ಬಿ.ಜಯಚಂದ್ರರವರು ನಾನು ಉತ್ತರ ಹೇಳಿದ ನಂತರ ಕೆಲವೊಂದು ಸ್ಪಷ್ಟೀಕರಣಗಳನ್ನು ಕೇಳಿದ್ದಾರೆ. ನಾನು ಈಗಾಗಲೇ ಹೇಳಿದ ಹಾಗೆ ಸುಪ್ರೀಂ ಕೋರ್ಟ್ ಆಜ್ಞೆ ಪ್ರಕಾರ ಏನು comply ಮಾಡಬೇಕಿತ್ತೋ ಅದನ್ನು comply ಮಾಡಿದ್ದೇವೆ, ನಿನ್ನೆ ಸಾಯಂಕಾಲದಿಂದ ನೀರು ಬಿಡುವುದನ್ನು complete stop ಮಾಡಿದ್ದೇವೆ. ನಿನ್ನೆಯಿಂದ ನೀರನ್ನು ಬಿಟ್ಟಿಲ್ಲ. ಅದನ್ನು clarify ಮಾಡಿದ್ದೇವೆ. ಇವತ್ತು ಮಧ್ಯಾಹ್ನ ಸುಪ್ರೀಂ ಕೋರ್ಟ್‌ನಲ್ಲಿ case hearingಗೆ ಬರುತ್ತಿದೆ. ೧೨ ಟಿ.ಎಂ.ಸಿ ನೀರು ಬಿಡಬೇಕೆಂದು CMC ಯಲ್ಲಿ ಏನು ನಿರ್ಣಯವಾಗಿದೆ ಅದರ ಬಗ್ಗೆ ಈಗಾಗಲೇ ನಾವು challenge ಮಾಡಿದ್ದೇವೆ. ಬಹಳ ಮುಖ್ಯವಾದ ವಿಷಯವೇನೆಂದರೆ, Cauvery Monitoring Board ಬಗ್ಗೆ, notification ಬಗ್ಗೆ ತಾವೇನು ಹೇಳಿದ್ದೀರಿ, December ೩೧st ಒಳಗೆ notification ಮಾಡಬೇಕೆಂದು ಸುಪ್ರೀಂಕೋರ್ಟ್‌ನಲ್ಲಿ ಏನು ಸಲಹೆ ಕೊಟ್ಟಿದ್ದಾರೆ ಅದರ ಪ್ರಕಾರ process ಮಾಡುವಂತಹದ್ದು ಮತ್ತು CMC

ವರದಿಯಲ್ಲಿ ಈ ತಿಂಗಳ ಅಂತ್ಯದೊಳಗೆ notification ಮಾಡಬೇಕೆಂದು ತಿಳಿಸಿದೆ; ಇದಕ್ಕೂ ಕೂಡ ಒಂದು ಸ್ಪಷ್ಟೀಕರಣವನ್ನು ನಾವು ಕೇಳಿದ್ದೇವೆ. ಈ notification issue ಮೊದಲು ಇವತ್ತು ಬೆಳಿಗ್ಗೆ ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇವೆ. ತಾವೇ ಹೇಳಿದ ಹಾಗೆ consequences ಏನಾಗುತ್ತದೆ? ಏಕೆಂದರೆ ೨-೩ issuesಅನ್ನು ನಾವು clarifyಮಾಡಬೇಕಾಗಿರುತ್ತದೆ. ಈಗಾಗಲೇ civil appeal ೨೪೫೩/೨೦೦೭ ಇದು ಸುಪ್ರೀಂಕೋರ್ಟ್ ಮುಂದೆ pending ಇದೆ. ಸಿವಿಲ್ ಅಪೀಲ್ ಕೇಸ್ pending ಇದೆ. Also the application filed before the Cauvery Water Dispute Tribunal U/S ೫(೩) of ISWD Act pending ಇದೆ. Pending ಇದ್ದಾಗಲೇ notification issue ಮಾಡುವ ವಿಚಾರದಲ್ಲಿ consequences ಏನಾಗುತ್ತದೆಂಬ ಬಗ್ಗೆ ತುರ್ತಾಗಿ CRA ಸಭೆಯನ್ನು ಕರೆಯಬೇಕೆಂಬುದನ್ನು ಈ ಪತ್ರದಲ್ಲಿ ವಿನಂತಿ ಮಾಡಿದ್ದೇನೆ. ತಕ್ಷಣವೇ ತಮಿಳುನಾಡು, ಕರ್ನಾಟಕ, ಪಾಂಡಿಚೇರಿ, ಕೇರಳ ಇವರನ್ನೆಲ್ಲಾ CRA ಸಭೆಗೆ ಕರೆಯಿರಿ, ನಮ್ಮ ಅಭಿಪ್ರಾಯವನ್ನು ಕೇಳಿ, consultation ಮಾಡಿ ನಂತರ notification issue ಮಾಡಬೇಕು, ನಮ್ಮ consent ಕೇಳದೆ ಮಾಡಬಾರದೆಂದು ಇಂದು ಬೆಳಿಗ್ಗೆ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಹೀಗಾಗಿ ಇವರ ಬಗ್ಗೆ ಕೇಂದ್ರಸರ್ಕಾರ, ಮಾನ್ಯ ಪ್ರಧಾನ ಮಂತ್ರಿಗಳು CRA meeting ಮಾಡಿ ಒಂದು ಸ್ಪಷ್ಟೀಕರಣ ಕೊಟ್ಟರೆ consequences ಏನಾಗುತ್ತದೆ ಎನ್ನುವ ಬಗ್ಗೆ ನಮಗೂ ಕೂಡ ಸ್ವಲ್ಪ understandingಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆ ಪ್ರಯತ್ನವನ್ನು ನಾವು ಮಾಡಿದ್ದೇವೆ. ಈಗಾಗಲೇ ನಮ್ಮ stand clear ಮಾಡಿದ್ದೇವೆ. ಮತ್ತು CMC-ಯಲ್ಲಿನಮಗೇನು injustice ಆಗಿದೆ, ೧೨ ಟಿ.ಎಂ.ಸಿ ನೀರನ್ನು ಬಿಡಬೇಕೆಂಬ

ತೀರ್ಪು ಏನಾಗಿದೆ ಅದನ್ನು ಕೂಡ challenge ಮಾಡಿದ್ದೇವೆ. ಇಂದು ಸಾಯಂಕಾಲ ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ advocate ರವರು ಅದರ ಬಗ್ಗೆ mention ಮಾಡುತ್ತಾರೆ.ಅಲ್ಲಿ consequencesಏನಾಗುತ್ತದೆ ಎಂಬುದನ್ನು ತಿಳಿದುಕೊಂಡು ಮುಂದಿನ ನಿಲುವನ್ನುತೆಗೆದುಕೊಳ್ಳಬೇಕಾಗುತ್ತದೆ. ೧೨ ಟಿ.ಎಂ.ಸಿ ನೀರೆಂದರೆ ಇಡೀ ತಿಂಗಳು, ಇವತ್ತು ನಾವು ನೀರು ಬಿಟ್ಟಿಲ್ಲ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ every day ೧೦,೦೦೦ ಕ್ಯೂಸೆಕ್ಸ್ ನೀರು ಬಿಡಬೇಕು ಎನ್ನುವುದನ್ನು ನಾವು comply ಮಾಡಿದ್ದೇವೆ. ೧೨ ಟಿ.ಎಂ.ಸಿ ಯಲ್ಲಿ ಅದನ್ನು minus ಮಾಡಿ ಉಳಿದಿದ್ದು, additional ಆಗಿ ೧೨ ಟಿ.ಎಂ.ಸಿ ನೀರಲ್ಲ. ಇದು ಬಹಳ ಜನರಿಗೆ confusion ಇದೆ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಆರು ಟಿ.ಎಂ.ಸಿ ನೀರು ಬಿಡಿ ಎಂದರು, CMCಯವರು ೧೨ ಟಿ.ಎಂ.ಸಿ ನೀರು ಬಿಡಿ ಎಂದರು. It is not additional. ಅದು ಅದರಲ್ಲಿ include ಆಗಿದೆ. ಹೀಗಾಗಿ whatever it may be, ಇವತ್ತು ಸುಪ್ರೀಂಕೋರ್ಟ್ ಆದೇಶದ ಪ್ರಕಾರ comply ಮಾಡಿದ್ದೇವೆ. ಅದನ್ನು comply ಮಾಡುವುದಕ್ಕೆ ಸಾಕಷ್ಟು ಸಂಕಷ್ಟಗಳನ್ನು ನಾವು ಅನುಭವಿಸಿದ್ದೇವೆ. ಆ ನೀರನ್ನು ಬಿಡುವ ಪರಿಸ್ಥಿತಿಯಲ್ಲಿ ರಾಜ್ಯ ಇಲ್ಲ. ಕುಡಿಯುವ ನೀರು, standing crop ಇರುವಂತಹದ್ದು ನಾವು ಸಹ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೇವೆ. ನಾವೂ ಕೂಡ ಬಹಳ ಸಂಕಟದಿಂದ ನೀರನ್ನು ಬಿಟ್ಟಿದ್ದೇವೆ. ಬಹಳ ಪ್ರೀತಿಯಿಂದ ನೀರನ್ನು ಬಿಟ್ಟಿಲ್ಲ. ಸುಪ್ರೀಂಕೋರ್ಟ್ ಆದೇಶವಿದೆ, comply ಮಾಡಬೇಕು, ನಾಳೆ ಕಾನೂನಿನ ತೊಡಕು ಬರಬಾರದೆಂಬ ದೃಷ್ಟಿಕೋನದಿಂದ ನೀರನ್ನು ಬಿಟ್ಟಿದ್ದೇವೆ. CMCಯವರು ಹೇಳಿರುವಷ್ಟು ನೀರು ಬಿಡುವುದು ಇವತ್ತು pending ಇದೆ, ಅದನ್ನು challenge ಮಾಡಿದ್ದೇವೆ. ಇವತ್ತು ಸಂಜೆ ಸುಪ್ರೀಂಕೋರ್ಟ್‌ತೀರ್ಪು ಬರುತ್ತದೆ. ಮತ್ತೆ ಚರ್ಚೆಗೆ ತೆಗೆದುಕೊಳ್ಳೋಣ. ನಾಳೆ ನಾಡಿದ್ದು ಇನ್ನೂ

ಅಧಿವೇಶನವಿದೆ ನಾವು ನೀವು ಕುಳಿತು ಚರ್ಚೆ ಮಾಡಿಕೊಂಡು ಮುಂದೆ ನಮ್ಮ ನಿಲುವೇನು ಎಂಬುದನ್ನು ತೀರ್ಮಾನ ಮಾಡೋಣ.

ಶ್ರೀ ಬಸವರಾಜ ಬೊಮ್ಮಾಯಿ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕಾವೇರಿ dispute ಬಗ್ಗೆ ಟ್ರಿಬ್ಯೂನಲ್‌ನ final notification ಬಗ್ಗೆ ಈ ಸದನದಲ್ಲಿ ಗಂಭೀರವಾಗಿಚರ್ಚೆ ಮಾಡುವ ಅವಶ್ಯಕತೆಯಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಅದಕ್ಕೆ ಸ್ಪಂದಿಸಿ ವಿಚಾರಗಳನ್ನು ಹೇಳಿದ್ದಾರೆ. ಅದರ ಹಿನ್ನೆಲೆಯನ್ನು ಇಟ್ಟುಕೊಂಡು ಎರಡು ವಿಚಾರಗಳನ್ನು ತಮ್ಮ ಮುಖಾಂತರ ಈ ಸದನದಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ೨೦೦೭ರಲ್ಲಿ ಟ್ರಿಬ್ಯೂನಲ್‌ನ final order ಆದ ನಂತರ ಎಲ್ಲಾ ರಾಜ್ಯಗಳು ಅದನ್ನು ಅವರವರ ಕ್ಲೈಮುಗಳು ಸರಿಯಾಗಿ ಬಂದಿಲ್ಲವೆಂದು ಮುಖ್ಯವಾಗಿ ಕರ್ನಾಟಕ, ತಮಿಳುನಾಡು, ಪಾಂಡಿಚೇರಿ ಮತ್ತು ಕೇರಳ ಅವರೆಲ್ಲರೂ ಕೂಡ original suit ನಲ್ಲಿ ಸುಪ್ರೀಂಕೋರ್ಟ್‌ನಲ್ಲಿ challenge ಮಾಡಿದ್ದೇವೆ. ಇದರಲ್ಲಿ ನಮ್ಮ ಸಂವಿಧಾನಬದ್ಧವಾದ ಹಕ್ಕನ್ನು ಪ್ರತಿಪಾದನೆ ಮಾಡಿದಂತಹ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಎಲ್ಲಾ ಟ್ರಿಬ್ಯೂನಲ್ ಮುಂದೆ ಕೂಡ ನಾವು clarificatory application ಏನು ಹಾಕಿದ್ದೇವೆ ಅವುಗಳನ್ನು ಮೊದಲು dispose ಮಾಡಿಸಿ ನಂತರ ಇಲ್ಲಿ ಬನ್ನಿ ಎಂಬ ಮಾತನ್ನು ಹೇಳಿತ್ತು. ಆದ್ದರಿಂದ ಇಷ್ಟು ದಿವಸದವರೆಗೆ pending ಇತ್ತು. ಈ ಮಧ್ಯೆ ತಮಿಳುನಾಡು notify ಮಾಡಬೇಡಿ ಎಂದು ಹೇಳಿತ್ತು, ನಾವೂ ಕೂಡ notify ಮಾಡಬೇಡಿ ಎಂದು ಹೇಳಿದ್ದೆವು. ಆದರೆ ಇಲ್ಲಿ ನಾವು ಗಮನಿಸಬೇಕಾಗಿರುವ ಬೆಳವಣಿಗೆ-ಯೇನೆಂದರೆ ತಮಿಳುನಾಡಿನ ಸರ್ಕಾರ ಬದಲಾವಣೆಯಾದ ನಂತರ ಈಗಿನ ಮಾನ್ಯ ಮುಖ್ಯಮಂತ್ರಿಯಾಗಿರುವ ಕು:ಜಯಲಲಿತಾ ರವರು ಇದನ್ನು notify ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಒತ್ತಡ ಹೇರಿದ್ದಾರೆ. ಈ ಹಿನ್ನೆಲೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿತ್ತು. ಆದ್ದರಿಂದ notify ಆದರೆ

ನಮ್ಮ ರಾಜ್ಯದ ಹಿತಾಸಕ್ತಿ ಮೇಲೆ ಇದರ ಪರಿಣಾಮವೇನಾಗುತ್ತದೆಂಬುದನ್ನು ನಾವು ಸೂಕ್ಷ್ಮವಾಗಿಗಮನಿಸಬೇಕಾಗುತ್ತದೆ. ಸುಪ್ರೀಂಕೋರ್ಟ್ ನಲ್ಲಿ ಮೊನ್ನೆ ನಡೆದ proceedings copy ಯನ್ನು ನಾವು ನೋಡಿದಾಗ ಅವರು shall do it ಎಂದು ಹೇಳಿಲ್ಲ. ನಿಮಗೆ ಮಾಡುವುದಕ್ಕೇನು ತೊಂದರೆಯಿದೆ; ಮತ್ತು ಯಾವಾಗ comply ಮಾಡಬಹುದೆಂದು ಹೇಳಿ ಎಂದು Additional Attorney Generalಗೆ ಅವರು ಹೇಳಿದ್ದರು. ಇಲ್ಲಿ ಬಂದಿರುವಂತಹ ಮುಖ್ಯ ಪ್ರಶ್ನೆಯೆಂದರೆ CMC ಗೆ ಇದರ ಆದೇಶವಿರಲಿಲ್ಲ. ಮೊನ್ನೆ ನಡೆದಂಥ ಸುಪ್ರೀಂಕೋರ್ಟ್ proceedings ನಲ್ಲಿ ಎರಡು ಭಾಗವಿದೆ. ಒಂದು CMC ಗೆ ಎರಡೂ ಕಡೆ standing crop ಎಷ್ಟಿದೆ? ಎಷ್ಟು ನೀರು ಬೇಕೆಂಬ ಬಗ್ಗೆ status report ಕೊಡಿ ಎಂದು ಮಾತ್ರ ಹೇಳಿದ್ದರು. ಎಷ್ಟು ನೀರನ್ನು ಬಿಡಬೇಕೆಂಬ ಮಾತನ್ನು ಕೂಡ ಅವರು ಹೇಳಿರಲಿಲ್ಲ. ಎರಡನೆಯದು Additional Attorney General ಗೆ ಅಂದರೆ ಇಲಾಖೆಗೆ ಈ notification ಮಾಡುವುದಕ್ಕೇನು ತೊಂದರೆಯಿದೆಯೆಂದು ಕೇಳಿದೆ. ಆ ಸಂದರ್ಭದಲ್ಲಿ Additional Attorney General ರವರು, ಹಿಂದೆ ನಾವು ಕೇಂದ್ರದ Law Department ಗೆ ಕೇಳಿದಾಗ ಇದನ್ನು notify ಮಾಡುವುದಕ್ಕೆ ಬರುವುದಿಲ್ಲ, ಎಲ್ಲ original suit ಗಳು pending ಇವೆಯೆಂದು ಅಭಿಪ್ರಾಯ ಪಟ್ಟರು. ಆ ವಿಚಾರದಲ್ಲಿ ಇನ್ನೊಂದು ಮಾತನ್ನು ಕೂಡ ಅವರು ಹೇಳಿದ್ದರು CWT Chairman ರವರು ಇವತ್ತು ತೀರಿಹೋಗಿದ್ದಾರೆ ಅವರ ಸ್ಥಾನದಲ್ಲಿ ಕೂಡಲೆ ಮತ್ತೊಬ್ಬರನ್ನು ನೇಮಿಸಿ ಆ proceedings ಅನ್ನು ಆದಷ್ಟು ಬೇಗನೆ ಮುಗಿಸುತ್ತೇವೆಂಬ ಎರಡು ವಿಚಾರ-ಗಳನ್ನು ಹೇಳಿದ್ದರು. ಆದರೆ shall ಎಂದು ಇಲ್ಲ.ಆದಾಗ್ಯೂ ಕೂಡ ಬೆಳವಣಿ-ಗೆಯಾಗಿರುವುದು, ಕಳೆದ ಆರು ತಿಂಗಳುಗಳಿಂದ ಮಾನ್ಯ ಪ್ರಧಾನ ಮಂತ್ರಿಗಳಿಗೆ ಮೂರು ಪತ್ರಗಳನ್ನು ಬರೆದು ತಮಿಳುನಾಡಿನ ಮುಖ್ಯಮಂತ್ರಿಗಳ ಒತ್ತಡವೇನಿತ್ತು ಅದರ ಹೊಂದಾಣಿಕೆಯಾಗುವ ರೀತಿಯಲ್ಲಿ ಇವತ್ತು CMC ಯ ಯಾವುದೇ

direction ಇಲ್ಲದಿದ್ದರೂ ಕೂಡ CMC on its own has said that. OK, ಇದನ್ನು ಒಂದು ತಿಂಗಳೊಳಗೆ ನೋಟಿಫೈ ಮಾಡುತ್ತೇವೆ ಇದು last meeting, ಇದಾದ ನಂತರ CMC ಇಲ್ಲ, CRA ಕೂಡ ಇಲ್ಲವೆಂದು ಆಗಿದೆ. CMC ಗೆ ಈ ರೀತಿಯ ನಿರ್ಣಯಗಳನ್ನುತೆಗೆದುಕೊಳ್ಳುವಂತಹ ಅಧಿಕಾರವಿಲ್ಲ. Only the department has got powers. ಆದ್ದರಿಂದ, ಸರ್ಕಾರಕ್ಕೆ ಅಧಿಕಾರವಿದೆ, CMCಗೆ ಇಲ್ಲ. CMC ಬೇರೆ, ಸರ್ಕಾರ ಬೇರೆ. ಅವರೇ Chairman ಇರಬಹುದು, ಇವತ್ತು ಪ್ರಧಾನ ಮಂತ್ರಿ ಬೇರೆ, CRA ಅಧ್ಯಕ್ಷರು ಬೇರೆ, quasi judicial ಎಂದು ತಾವೇನು ಹೇಳಿದ್ದೀರಿ ಅದೇ ರೀತಿಜಲಸಂಪನ್ಮೂಲ ಸಚಿವರು ಬೇರೆ, ಜಲಸಂಪನ್ಮೂಲ ಕಾರ್ಯದರ್ಶಿಯಾಗಿ ಕೆಲಸ ಮಾಡುವುದು ಬೇರೆ. CMC ಯನ್ನು ಅವರು preside over ಮಾಡುವಾಗ ಈ ಮಾತನ್ನು ಹೇಳುವುದು ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿ ಮಾಡಿರುವುದೆಂಬುದು ನಮ್ಮ ಭಾವನೆಯಿದೆ. ಅದನ್ನು ಕೂಡ ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ. CMC ಗೆ ಅಧಿಕಾರವಿಲ್ಲ. CMC and CRA, they are just to implement the tribunal orders, to oversee the tribunal orders ಎನ್ನುವ ದೃಷ್ಟಿ ಇರುವುದರಿಂದ ಇವತ್ತು ಆಡಳಿತ ವ್ಯಾಪ್ತಿಯಲ್ಲಿಲ್ಲವೆಂಬುದನ್ನು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.

ಆದ್ದರಿಂದ ಇದು permanent ಆಗಿ ಒಮ್ಮೆ ನೋಟಿಫಿಕೇಷನ್ ಆದರೆ, CauveryMonitoring Board ಬಂದರೆ ಖಾಯಂ ಆಗಿ ಆಗುವಂತಹ ಸಾಧಕ ಬಾಧಕಗಳೇನು? ಇವತ್ತು ಅದರಲ್ಲಿ ಎರಡು ಬಗೆಗಳಿವೆ. ನಮ್ಮ cropping pattern restriction ಹೋಗುತ್ತದೆ. ೧೧.೨ ಇರುವುದು final order ನಲ್ಲಿ ಹೋಗುತ್ತದೆ. ಬೆಳೆಗಳಿಗೆ reading ಬರುತ್ತದೆ ಮತ್ತು ೨೦೫ TMC ಯಿಂದ ೧೯೨ ಕ್ಕೆ ಬರುವುದು ನಿಜ.ಆದರೆ ಒಟ್ಟಾರೆ ಕಾವೇರಿಯಲ್ಲಿರುವ claim ನ ಪರಿಸ್ಥಿತಿ ಏನಾಗುತ್ತದೆ? Cauvery Monitoring Board ಅಧಿಕಾರಕ್ಕೆ

ಬಂದರೆ ನಮ್ಮ cropping pattern ಹೋಗುತ್ತದೆ. ನಮಗೆ ಬಿಡುವಂತಹ ನೀರು ನಮ್ಮ ರಾಜ್ಯದ ಹಕ್ಕು. ಉದಾಹರಣೆಗೆ ಇಂದು ಏನಾದರೂ ಕೂಡ ನಮ್ಮ ರಾಜ್ಯದ ರೈತರ ಹಕ್ಕಿನ ಪ್ರತಿಪಾದನೆ ಸಲುವಾಗಿಅವರಿಗೆ ಎಷ್ಟು ನೀರನ್ನು ಬಿಡಬೇಕು, ಯಾವಾಗ ಬಿಡಬೇಕು ಎನ್ನುವುದು ಇವತ್ತಿಗೂ ನಮಗೆ ಅಧಿಕಾರವಿದೆ.ಅವರು ad hoc ಆಗಿ ಆಯಾ ಅಪೀಲ್‌ನಲ್ಲಿ ಕೆಲವು ಕಡೆ ನೀರು ಬಿಡಿಸಿಕೊಳ್ಳುವ ಸಲುವಾಗಿ ಸುಪ್ರೀಂಕೋರ್ಟ್‌ಗೆ ಮೊರೆ ಹೋಗುವ ಅವಕಾಶವಿದೆ.ಅಂತಹ ಸಂದರ್ಭದಲ್ಲಿ ನಾವು ad hoc ಆಗಿ ಬಿಟ್ಟಿರಬಹುದು. ಇಂದು ನಮ್ಮ ರೈತರಿಗೆ ಹೇಮಾವತಿ, ಕಬಿನಿ, ಹಾರಂಗಿ, ಕೆ.ಆರ್.ಎಸ್. ಇರಬಹುದು, ಇವತ್ತಿಗೂ ಸಂದರ್ಭಕ್ಕನುಸಾರವಾಗಿ ಯಾವ್ಯಾವ ಸಮಯಕ್ಕೆ ಎಷ್ಟೆಷ್ಟು ನೀರನ್ನು ಬಿಡಬೇಕೆನ್ನುವ ಅಧಿಕಾರ ನಮಗಿದೆ. ನಾಳೆ ಒಂದು ವೇಳೆ Cauvery Monitoring Board ಬಂದರೆ ಅದರಲ್ಲಿ ಎಲ್ಲಾ ರಾಜ್ಯದ ಪ್ರತಿನಿಧಿ- ಗಳಿರುತ್ತಾರೆ. ಆದರೆ ಕೇಂದ್ರ ಸರ್ಕಾರದ CWC Member Chairman ಏನು ಆಗಿರುತ್ತಾರೆ, ಅವರದೇ ಫೈನಲ್ ಆಗಿರುತ್ತದೆ. ಆದ್ದರಿಂದ ಎಲ್ಲಾ ಸಾಧಕ-ಬಾಧಕಗಳನ್ನು ಈ ಸಭೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ.ದೂರಗಾಮಿ ಪರಿಣಾಮಗಳುಆಗ ುವುದನ್ನುತಡೆಗಟ್ಟಬೇಕಾಗುತ್ತದೆ. ಆದ್ದರಿಂದ ತಾವು ಎತ್ತಿರುವಂತಹ ಪ್ರಶ್ನೆ ಬಹಳ pertinent ಇದೆ, important ಇದೆ, relevant ಇದೆ. ಇದರ ಬಗ್ಗೆ ನಾವು ಪೂರ್ತಿಚರ್ಚೆಯನ್ನು ಮಾಡಿ, CRA ಸಭೆಯನ್ನು ಕರೆದಾಗ ಎಲ್ಲಾ ಪಕ್ಷದ ನಾಯಕರನ್ನು, ಹಾಗೂ ಆ ಭಾಗದ ಪ್ರಮುಖರನ್ನುಅಂದರೆ ಎಂ.ಪಿ- ಗಳಿರಬಹುದು, ಮಾಜಿ ಪ್ರಧಾನಮಂತ್ರಿಗಳಾಗಿರಬಹುದು ಮತ್ತು ಸ್ಥಳೀಯ ಶಾಸಕರಿರಬಹುದು,ಸಂಪೂರ್ಣವಾಗಿ ಸಾಧಕ-ಬಾಧಕಗಳನ್ನು ತಮ್ಮ ಮುಂದಿಟ್ಟು ಚರ್ಚೆ ಮಾಡಿ, ನಂತರ ನಮ್ಮ ರಾಜ್ಯದ ನಿಲುವನ್ನು ಹೇಳುತ್ತೇವೆ. ಇದು ಬಹಳ ಮಹತ್ವವಾಗಿರುವುದರಿಂದ CRA ನಿರ್ಣಯವನ್ನು ತೆಗೆದುಕೊಂಡು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೇಳುವುದರಿಂದ ಇದರ ಬಗ್ಗೆ ನಾವೆಲ್ಲರೂ ಕೂಡ

ಪ್ರಯತ್ನವನ್ನು ಮಾಡಬೇಕು. ಈಗಾಗಲೇ ರಾಜ್ಯ ಸರ್ಕಾರ ಮಾನ್ಯ ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಆದ್ದರಿಂದ ಮುಂದೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಏಕೆಂದರೆ ೩೧ನೇ ಡಿಸೆಂಬರ್ ೨೦೧೨ ರೊಳಗೆ ನೋಟಿಫೈ ಮಾಡಿದರೆ ಮುಂದೆ ಕಷ್ಟವಾಗುತ್ತದೆ.ಆ ಹಿನ್ನೆಲೆಯಲ್ಲಿ ನಾವೆಲ್ಲರೂ ಸೇರಿ ನಿರ್ಣಯವನ್ನು ಮಾಡಬೇಕೆನ್ನುವಅಫೀಲ್ ನ್ನು ಈ ಸದನಕ್ಕೆ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :-ತಾವು ಪ್ರಧಾನಮಂತ್ರಿಗಳಿಗೆ ಬರೆದಿರುವ ಪತ್ರವನ್ನುಕೊಡಬೇಕು.ಆದರೆ ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ಬಗ್ಗೆ ವ್ಯಾಪಕವಾದ ಚರ್ಚೆಯನ್ನು ಮಾಡುತ್ತೇವೆಂದು ಹೇಳಿದರು. ನನಗೆ ಒಂದೇ ಒಂದು ಆತಂಕವೆಂದರೆ, ಇವತ್ತು Advocatesಅಲ್ಲಿ appear ಆಗುತ್ತಿರತಕ್ಕಂಥವರು, ಅವರ consent ಕೊಟ್ಟು ಬಿಟ್ಟರೆ, suppose Hon'ble Supreme Court passes an order to implement it. ಏಕೆಂದರೆInterstate River Water Disputes Act ಪ್ರಕಾರ'it shall' ಅದನ್ನು ಆರು ತಿಂಗಳೊಳಗೆ ನೋಟಿಫೈ ಮಾಡಬೇಕೆಂದು ಇದೆ. ಅದಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಏಳು ವರ್ಷದವರೆಗೂ ಏನು ಮಾಡುತ್ತಿದ್ದೀರಿ ಎಂದು ಪ್ರಶ್ನೆ ಮಾಡಿದೆ. ಒಂದು ವೇಳೆ ಅವರು ಯಥಾವತ್ತಾಗಿ ಆದೇಶ ಮಾಡಿ ಎಂದು ಹೇಳಿದರೆ ಮುಂದೆ ತೊಂದರೆಯಾಗಬಹುದೇನೋ? ಕೇಂದ್ರ ಸರ್ಕಾರಕ್ಕೆ embarrassmentಆಗುತ್ತದೆಯೇನೋ? ಆದಕಾರಣ ಇನ್ನೂ ಒಂದು ಸಾರಿ ನಮ್ಮವಕೀಲರುಗಳಿಗೆ ಅಡ್ವೈಸ್ ಮಾಡಿ, ಇನ್ನೂ ಸಮಯವಿದೆ appeal ಮಾಡಿ, the House should be heard ಎಂದು. ಫೈನಲ್ ನೋಟಿಫಿಕೇಷನ್ ಆಗಬೇಕಾದರೆ ಆ ಭಾಗದ ರೈತರನ್ನು ಕೂಡ consult ಮಾಡಬೇಕು, ನಮ್ಮ ವಿಚಾರವೇನು ಎನ್ನುವುದು ಅವರಿಗೆ ಹೇಳಬೇಕು.ಮಾನ್ಯ ಎಸ್.ಆರ್.ಬೊಮ್ಮಾಯಿಯವರು

ಹೇಳಿದ ಪ್ರಕಾರ ಕಡತದಲ್ಲಿ ಹೋಗಿದೆ.ಕುಮಾರಿ ಜಯಲಲಿತಾ ಅವರು ಮೂರು ಸಾರಿ ಪತ್ರ ಬರೆದು ನೋಟಿಫೈ ಮಾಡಿ ಎಂದು ಹೇಳಿದರು, ಹಿಂದಿನ ಸರ್ಕಾರ ಮಾಡಿರಲಿಲ್ಲ, ಬೇಡ ಎಂದು ಹೇಳಿ ಈಗ ಮಾಡಿದ್ದಾರೆ. ಎಲ್ಲೋ ಒಂದು ಕಡೆ ಕುಮಾರಿಜಯಲಲಿತಾ ಅವರ ಒತ್ತಡಕ್ಕೋಸ್ಕರ ಮಾಡಿದ್ದಾರೆ ಎನ್ನುವ ಭಾವನೆ ಬರುವುದು ಬೇಡ. ಆ ಕಾರಣದಿಂದ ಒಂದು ದಿವಸ ಅಧಿವೇಶನವನ್ನು ಮುಂದುವರೆಸಿದರೂ ಚಿಂತೆಯಿಲ್ಲ, ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಇಂದು ಸುಪ್ರೀಂ ಕೋರ್ಟ್ ನಿರ್ಣಯ ಏನಾಗುತ್ತದೆಯೆಂದು ನೋಡಿಕೊಂಡು, ನಂತರ ನಮ್ಮೆಲ್ಲರ ಅಭಿಪ್ರಾಯ ತೆಗೆದುಕೊಂಡು, ತದನಂತರ final notification ಬರಬೇಕೆನ್ನುವುದು ನಮ್ಮ ಆಗ್ರಹವಾಗಿದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನನ್ನ ಪ್ರಕಾರ final notification ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆTribunal ಮುಂದೆ clarificatory petition ಇದೆ. Clarification ಕೇಳಿ ಒಂದು petition ಹಾಕಿದ್ದೇವೆ. ಇನ್ನೊಂದು ಇಡೀ Tribunal award ಅನ್ನು ಚಾಲೆಂಜ್ ಮಾಡಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಒಂದು petition ಇದೆ. ಇವೆರಡೂ ಇನ್ನೂ ಇತ್ಯರ್ಥವಾಗಿಲ್ಲ. They are still pending. ಸುಪ್ರೀಂ ಕೋರ್ಟ್ ಇವೆರಡನ್ನೂ ಇತ್ಯರ್ಥ ಮಾಡದೇ, I don't know ಏಳು ವರ್ಷವಾದರೂ ಏಕೆ ಮಾಡಿಲ್ಲ ಎಂದು ಸುಪ್ರೀಂ ಕೋರ್ಟ್ ಏಕೆ ಕೇಳಿದೆ ಎಂದು ಗೊತ್ತಿಲ್ಲ. What about these two petitions? Clarification ಕೇಳಿರುವ ಅರ್ಜಿ ಇದೆ. ಸುಪ್ರೀಂ ಕೋರ್ಟ್ ಮುಂದೆ ಹಾಕಿರುವ Original Suit ಅದು. ಅದನ್ನು ಮಾನ್ಯ ಈಶ್ವರಪ್ಪ ಅವರು ಇದ್ದಾಗ ಹಾಕಿದ್ದು. That is also pending. ಅವುಗಳು ಇತ್ಯರ್ಥವಾಗದೆ ನೋಟಿಫಿಕೇಷನ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ Upper Krishna ದಲ್ಲಿ don't notify until these

petitions are disposed of ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವೇ ಹೇಳಿದೆ. ಆ ಕಾರಣದಿಂದ ನೋಟಿಫೈ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- Inter state River Water Disputes Act ಪ್ರಕಾರ, the final notification should be issued within six months ಎನ್ನುವುದು ನಿಜ. Inter State Water Dispute final Tribunal order has meant as Supreme Court decree ಎಂದು judgment ಆಗಿದೆ. ಆದರೆ ನಮಗೆ Constitutional rights ಇದೆ. Supreme Court Civil appeals ನಲ್ಲಿ Article ನಲ್ಲಿ, States have got right to go against any Tribunal or any other Committee, or any other proceedings ಬಗ್ಗೆ, States have got that absolute right, that fundamental right. Therefore under that Section, under that Article, all states will file the civil appeals to the Hon'ble Supreme Court. ನಮ್ಮ ಸಂವಿಧಾನದ Article ನಲ್ಲಿ Civil Appeals ಗೆ ಒಂದು ಪ್ರಾವಿಷನ್ ಇದೆ. ಅದರ ಪ್ರಕಾರ Constitution over rides the Act.ಆದ್ದರಿಂದ ಇದರಲ್ಲಿ ನಾವು ಮಾಡಿದ್ದೇವೆ.ಅದು ಸಂವಿಧಾನಬದ್ಧವಾಗಿದೆ, ಅದು ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಪೆಂಡಿಂಗ್‌ನಲ್ಲಿದ್ದಾಗ ಮಾಡುವುದಕ್ಕೆ ಹೇಗೆ ಸಾಧ್ಯ? ಈ ರೀತಿಯ ಮೂಲಭೂತವಾದ ಪ್ರಶ್ನೆ ಬಂದಾಗ ಸುಪ್ರೀಂ ಕೋರ್ಟ್‌ನವರು ಇತ್ತೀಚೆಗೆ ಒಂದು observation ಮಾಡಿದ್ದಾರೆ. ಐದು ವರ್ಷಗಳ ಕಾಲ ನೀವು ಏಕೆ ಇಟ್ಟು ಕೊಂಡಿದ್ದೀರಿ? subject to the outcome of those petitions ಎಂದು ಏಕೆ ಆ ರೀತಿ issue ಮಾಡಬಾರದು ಎನ್ನುವ ಒಂದು ಹೊಸ dimension ಕೊಡುವ ಪ್ರಯತ್ನ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರ ಕೊಟ್ಟಿರುವುದನ್ನು Law Department ಗೆ ಅಭಿಪ್ರಾಯ ಪಡೆಯುವ ಉದ್ದೇಶದಿಂದ ಎಲ್ಲವನ್ನೂ ಪರಿಗಣಿಸಿನೀಡಲಾಗಿದೆ.ನಮ್ಮ ಪ್ರಶ್ನೆ

ಬಂದಿರುವುದೇನೆಂದರೆ CMC ಯವರು ಅದನ್ನು ಮುಟ್ಟದೇ Attorney General ಅವರಿಗೆ ಬಿಟ್ಟಿದ್ದರೆ ಬಹಳ safe ಆಗಿರುತ್ತಿತ್ತು. CMC ತನ್ನ ವ್ಯಾಪ್ತಿ ಮೀರಿ ಆ report ನಲ್ಲಿ ಪ್ರಸ್ತಾಪ ಮಾಡಿರುವುದರಿಂದ ಸುಪ್ರೀಂ ಕೋರ್ಟ್‌ನಲ್ಲಿ ಏನಾದರೂ ಆದರೆ ಎಚ್ಚರಿಕೆ ವಹಿಸಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು : ಈ ಚರ್ಚೆಯನ್ನು ಮುಗಿಸೋಣ. ಈಗಾಗಲೇ ಸಾಕಷ್ಟು ಹೇಳಿದ್ದೀರಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಏಕೆ ನಾವು ಎದ್ದಾಗಲೇ ನೀವು ಎದ್ದು ನಿಂತು ಕೊಳ್ಳುತ್ತೀರಿ?

ಅಧ್ಯಕ್ಷರು :- ಆಯಿತು, ಬೇಗ ಮುಗಿಸಿ. ಮಾನ್ಯ ಶಿವಲಿಂಗೇಗೌಡರೆ ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :ಮಾನ್ಯ ನೀರಾವರಿ ಸಚಿವರು ಇಲ್ಲಿ ಮುಕ್ತವಾಗಿಚರ್ಚೆಯಾಗಬೇಕು, ನಮ್ಮ ಹಕ್ಕನ್ನು ಕಾಪಾಡಿಕೊಳ್ಳುವ ಸಲುವಾಗಿ ಅಲ್ಲಿ ಸಮರ್ಪಕವಾದ ವಾದವನ್ನು ಮಂಡಿಸಬೇಕೆಂದು ಹೇಳಿದರು. ಈಗಾಗಲೇ ಚರ್ಚೆ ಮಾಡಿದ್ದೇವೆ. ಅದರ ಬಗ್ಗೆ ಎರಡು ಮಾತಿಲ್ಲ.ಇಲ್ಲಿ ಅಂಕಿ ಅಂಶಗಳ ಪ್ರಕಾರ ಸಿ.ಆರ್.ಎ. ನವರು ವರದಿ ಕೊಟ್ಟಿದ್ದರೂ ಕೂಡ ಎಲ್ಲೋ ಒಂದು ಕಡೆ overlook ಮಾಡಿ ನಮ್ಮ ಮೇಲೆ ಒತ್ತಡ ಹೇರಿರುವುದನ್ನು ನಾವು ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ.ಆದ್ದರಿಂದ ಇಲ್ಲಿ ನಾವು ಚರ್ಚೆ ಮಾಡುವುದಕ್ಕಿಂತ ಹೆಚ್ಚಿನದಾಗಿಅಲ್ಲಿ ಯಾರು ಸಮರ್ಪಕವಾದ ಒತ್ತಡವನ್ನು ಹೇರುತ್ತಾರೋ ಅವರು ಯಶಸ್ವಿಯಾಗುತ್ತಾರೆ. ಆದಕಾರಣ ಆ ದಿಕ್ಕಿನಲ್ಲಿ ಅಲ್ಲಿ ಒತ್ತಡವನ್ನು ಹೇರುಬೇಕೆಂದು ತಮ್ಮ ಮೂಲಕ ಪ್ರಯತ್ನ ಮಾಡುತ್ತೇನೆ.